# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 171 |
| ಉತ್ತರಿಸಬೇಕಾದ ದಿನಾಂಕ | : | 13.09.2021 |
| ಸದಸ್ಯರ ಹೆಸರು | : | ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಅರಣ್ಯ, ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಹಾಸನ ಜಿಲ್ಲೆ, ಸಕಲೇಶಪುರ ತಾ: ಬ್ಯಾಗಡಹಳ್ಳಿ ಗ್ರಾಮ ಕೆಎಫ್‌ಡಿಸಿರಲ್ಲಿ ಸರ್ವೆ ನಂ.32ರಲ್ಲಿ 52 ಎಕರೆ ಡಿಮ್ಡ್ ಅರಣ್ಯ ಪ್ರದೇಶವನ್ನು ಭೂ ಮಾಫಿಯಾದಾರರಿಗೆ ಹಂಚಿಕೆ ಮಾಡಲು ಸಹಾಯ ಮಾಡಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆಯೇ; ಕೈಗೊಂಡಿದ್ದಲ್ಲಿ ಇದರ ಸಂಪೂರ್ಣ ವಿವರ ಒದಗಿಸುವುದು; | ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕು ಬ್ಯಾಗಡಹಳ್ಳಿ ಗ್ರಾಮದ ಸರ್ವೆ ನಂ.32ರಲ್ಲಿನ ಪ್ರದೇಶವು ಅರಣ್ಯ ಪ್ರದೇಶವೋ ಅಥವಾ ಕಂದಾಯ ಭೂಮಿಯೋ ಎಂಬ ಬಗ್ಗೆ ಉದ್ದೇಶಪೂರ್ವಕವಾಗಿ ತಪ್ಪು ಅಭಿಪ್ರಾಯ ನೀಡಿ ಬೇಜವಾಬ್ದಾರಿ ಮತ್ತು ಕರ್ತವ್ಯ ನಿರ್ಲಕ್ಷ್ಯತೆ ತೋರಿರುವ ಆರೋಪಕ್ಕೆ ಸಂಬಂಧಿಸಿದಂತೆ ಶ್ರೀ ಎಂ.ಎಲ್.ಮಂಜುನಾಥ್, ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವಿಭಾಗ, ಹಾಸನ ಇವರಿಗೆ ಸರ್ಕಾರದ ಕಾರಣ ಕೇಳುವ ನೋಟೀಸ್ ಹಾಗೂ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿದೆ. ಸದರಿ ಪ್ರಕರಣದಲ್ಲಿ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸಲಾಗಿದ್ದು, ವಿಚಾರಣಾಧಿಕಾರಿಯು ಇಲಾಖಾ ವಿಚಾರಣೆಯನ್ನು ಮುಕ್ತಾಯಗೊಳಿಸಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ವಿಚಾರಣಾ ವರದಿಯನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. |
| ಆ | ಸದರಿ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಯಾವುದೇ ಶಿಸ್ತು ಕ್ರಮ ಕೈಗೊಳ್ಳದೆ ದೋಷಾರೋಪಣಾ ಪಟ್ಟಿ ಜಾರಿ ಮಾಡಿ ಶಿಸ್ತು ಕ್ರಮ ಕೈಗೊಳ್ಳಲು ವಿಳಂಬಧೋರಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;) ಸಂಪೂರ್ಣ ವಿವರ ಸಲ್ಲಿಸುವುದು) | ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕು ಬ್ಯಾಗಡಹಳ್ಳಿ ಗ್ರಾಮ ಸರ್ವೆ ನಂ.32ರಲ್ಲಿನ ಭೂಮಿಯನ್ನು 13 ಜನ ಹೇಮಾವತಿ ಮುಳುಗಡೆ ಸಂತ್ರಸ್ಥರಿಗೆ ಹಂಚಿಕೆ ಮಾಡುವ ಕುರಿತು ಲೋಪಗಳನ್ನು ಎಸಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಶ್ರೀ ಬಿ. ಭಾಸ್ಕರ್ ರಾವ್, ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೆ.ಎಫ್.ಡಿ.ಸಿ, ಚಿಕ್ಕಮಗಳೂರು ವಿಭಾಗ, ಶ್ರೀ ಬಿ.ಎಲ್.ಜಿ.ಸ್ವಾಮಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕೆ.ಎಫ್.ಡಿ.ಸಿ, ಚಿಕ್ಕಮಗಳೂರು ಹಾಗೂ ಶ್ರೀ ಕೆ. ಮೊಗಣ್ಣಗೌಡ, ನೆಡುತೋಪು ಅಧೀಕ್ಷಕರು, ಕೆ.ಎಫ್.ಡಿ.ಸಿ. ಹಾಸನ ಘಟಕ, ಚಿಕ್ಕಮಗಳೂರು ಇವರುಗಳಿಗೆ ಸರ್ಕಾರದ ಕಾರಣ ಕೇಳುವ ನೋಟೀಸ್ ಹಾಗೂ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿರುತ್ತದೆ. ಸದರಿ ದೋಷಾರೋಪಣಾ ಪಟ್ಟಿಗೆ ಸದರಿ ಅಧಿಕಾರಿ/ನೌಕರರು ತಮ್ಮ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ಲಿಖಿತ ಹೇಳಿಕೆಗಳನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. |

| | | |
|---|---|---|
| ಇ | ಸದರಿ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತಂದ ನಿಗಮದ ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಜರುಗಿಸಿ ಕರ್ತವ್ಯದಿಂದ ವಜಾಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಸಂಪೂರ್ಣ ಮಾಹಿತಿ ಒದಗಿಸುವುದು). | ಇಲ್ಲ.<br><br>ಇತರೆ ಆರೋಪಗಳ ಹಿನ್ನೆಲೆಯಲ್ಲಿ ನಿಗಮದ ಸಿಬ್ಬಂದಿಯನ್ನು ಕೆಲಸದಿಂದ ವಜಾಗೊಳಿಸಿ ಆದೇಶಿಸಲಾಗಿದೆ. ( ಆದೇಶದ ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ) |

<u>ಸಂಖ್ಯೆ: ಎಫ್‌ಇಇ 46 ಎಫ್‌ಡಿಇ 2021</u>

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು

(97) 194-34-4 / 107

ಅನುಬಂಧ

# ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)


orporate Identity No: UO2001KA1971SGC001999

ಇ-ಮೇಲ್ : info@kfdcl.com

ವೆಬ್‌ಸೈಟ್ : www.kfdcl.kar.nic.in

ನಂ. ಮಹಡಿ, "ವನವಿಕಾಸ" 18ನೇ ಅಡ್ಡರಸ್ತೆ,
ಮಲ್ಲೇಶ್ವರ, ಬೆಂಗಳೂರು-560 003.

ದೂರವಾಣಿ ಕಚೇರಿ : 23345192, 23345711, 23345712
ಫ್ಯಾಕ್ಸ್ : 080-23461647


ಶಿಸ್ತು ಪ್ರಾಧಿಕಾರಿಗಳು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಕಛೇರಿ ನಡವಳಿ.

----

ಉಪಸ್ಥಿತರು: ಶ್ರೀಮತಿ ಮಧುಶರ್ಮ, ಭಾಅಸೇ.,
ಶಿಸ್ತು ಪ್ರಾಧಿಕಾರಿಗಳು ಮತ್ತು ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ,
ಬೆಂಗಳೂರು.

| | | |
|---|---|---|
| ವಿಷಯ: | ಶ್ರೀ ಎಂ.ಪಾಪೇಗೌಡ, ಪ್ರಥಮ ದರ್ಜೆ ಸಹಾಯಕರು, ಕೇಂದ್ರ ಕಛೇರಿ ಬೆಂಗಳೂರು ಇವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ಅಂತಿಮ ಆದೇಶ. | |
| ಉಲ್ಲೇಖ: | 1. | ಶ್ರೀ ಎಂ.ಪಾಪೇಗೌಡ, ಇವರನ್ನು ಅಮಾನತ್ತುಗೊಳಿಸಿದ ಈ ಕಛೇರಿ ಆದೇಶ, ಸಂಖ್ಯೆ: 176/2019-20 ದಿನಾಂಕ: 20.2.2020. |
| | 2. | ಈ ಕಛೇರಿಯ ಸಮಸಂಖ್ಯೆಯ ದೋಷಾರೋಪಣ ಪಟ್ಟಿ ಸಂಖ್ಯೆ: ಕಅಅನಿನಿ/ಎ1/ಸಿಬ್ಬಂದಿ/ದೂರರ್ಜಿ/2019-20/51 ದಿನಾಂಕ 22.4.2020. |
| | 3. | ಶ್ರೀ ಎಂ.ಪಾಪೇಗೌಡ, ಇವರ ವಿವರಣೆ ದಿನಾಂಕ 2.7.2020. |
| | 4. | ಈ ಕಛೇರಿಯ ಅಧಿಕೃತ ಜ್ಞಾಪನ ಸಂ. ಕಅಅನಿನಿ/ಎ1/ಎಂ.ಪಾ/ವಿಚಾರಣೆ/2020-21/392 ದಿನಾಂಕ 7.7.2020. |
| | 5. | ವಿಚಾರಣಾಧಿಕಾರಿ ಶ್ರೀಮತಿ ಕೆ.ಕಮಲ, ಭಾ.ಅ.ಸೇ., ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು, ಇವರ ವಿಚಾರಣಾ ವರದಿ ಸಂಖ್ಯೆ : ಕಅಅನಿನಿ/ಕಾನಿ/ಎ2/ಎಫ್-12/ಇವಿ-05/2020-21 ದಿನಾಂಕ : 18.01.2021. |

Madhu Sharma
30/01/21

<u>ಪ್ರಸ್ತಾವನೆ:</u>

ಶ್ರೀ ಎಂ.ಪಾಪೇಗೌಡ. ಇವರು ಕೇಂದ್ರ ಕಛೇರಿಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದ ಸಮಯದಲ್ಲಿ ಕಛೇರಿಗೆ ಅನಧಿಕೃತವಾಗಿ ಗೈರುಹಾಜರಾಗಿರುವುದು, ಅವರಿಗೆ ನಿಗಮದಿಂದ ಯಾವುದೇ ಅನುಮತಿಯಿಲ್ಲದಿದ್ದರೂ, ಸುದ್ದಿ ಮಾಧ್ಯಮಗಳಿಗೆ ನಿಗಮದ ವಿರುದ್ಧವಾಗಿ ಸುಳ್ಳು ಸುದ್ದಿಯನ್ನು ನೀಡುವುದು, ಮೇಲಾಧಿಕಾರಿಗಳ ಅನುಮತಿಯಿಲ್ಲದೇ ಸರ್ಕಾರಕ್ಕೆ ದೂರರ್ಜಿಗಳನ್ನು ಪದೇ ಪದೇ ಸಲ್ಲಿಸುವುದು, ಮೇಲಾಧಿಕಾರಿಗಳ ಅನುಮತಿಯಿಲ್ಲದೇ ವಿವಿಧ ಸರ್ಕಾರಿ ಕಛೇರಿಗಳಲ್ಲಿ ಸುತ್ತಾಡುವುದು, ಮಾನ್ಯ ಕರ್ನಾಟಕ ಲೋಕಾಯುಕ್ತರಿಗೆ ನಿಗಮದ ಅಧಿಕಾರಿಗಳ ವಿರುದ್ಧ ಸುಳ್ಳು ಆಪಾದನೆಗಳ ದೂರರ್ಜಿ ಸಲ್ಲಿಸಿ ನಿಗಮವನ್ನು ಇಕ್ಕಟ್ಟಿಗೆ ಸಿಲುಕಿಸಿರುವುದು, ತನ್ನ ಸ್ವಂತ ಹಿತಾಸಕ್ತಿಗಳಿಗಾಗಿ, ಅನಾವಶ್ಯಕ ದಾಖಲೆಗಳನ್ನು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಕೇಳಿ ನಿಗಮದ ಸಿಬ್ಬಂದಿಗಳ ವ್ಯರ್ಥ ಕಾಲಹರಣ ಮಾಡುವುದು, ನಿಗಮದ ಅಧಿಕಾರಿಗಳ ವಿರುದ್ಧ ಸುಳ್ಳು ಆಪಾದನೆಗಳನ್ನು ಮಾಡುತ್ತಾ, ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆಯನ್ನು ಹೂಡುವುದು, ಇಂತಹುದೇ ಸುಳ್ಳು ಆಪಾದನೆಗಳನ್ನು ನಿಗಮದ ಅಧಿಕಾರಿಗಳ ಮೇಲೆ ಹೊರಿಸುತ್ತಾ, ಕೇಂದ್ರ ಸರ್ಕಾರಕ್ಕೆ ದೂರರ್ಜಿಗಳನ್ನು ಸಲ್ಲಿಸುವುದು, ಇತ್ಯಾಧಿ ವಿಷಯಗಳ ಕುರಿತಂತೆ ವಿಚಾರಣೆ ನಡೆಸಲು ಉದ್ದೇಶಿಸಿ, ವಿಚಾರಣೆಯನ್ನು ಬಾಕಿ ಇರಿಸಿ ಅವರನ್ನು ಉಲ್ಲೇಖ (1)ರಲ್ಲಿ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

ನಂತರ ಇವರು ತಮಗೆ ವಹಿಸಿದ ಕರ್ತವ್ಯಗಳ ನಿರ್ಲಕ್ಷತೆ ಕುರಿತಂತೆ ಇವರಿಗೆ ದೋಷಾರೋಪಣ ಪಟ್ಟಿಯನ್ನು ಉಲ್ಲೇಖ (2)ರಲ್ಲಿ ಜಾರಿ ಮಾಡಲಾಗಿತ್ತು. ಆದರೆ ಇವರು ಸದರಿ ದೋಷಾರೋಪಣ ಪಟ್ಟಿಯ ಅಂಶಗಳಿಗೆ ನಿಗದಿತ ಸಮಯದಲ್ಲಿ ಸಮರ್ಪಕವಾದ ಉತ್ತರಗಳನ್ನು ನೀಡದೇ ಇದ್ದ ಕಾರಣ ಇವರ ಮೇಲೆ ಇಲಾಖಾ ವಿಚಾರಣೆಯ ಮುಂದುವರಿಕೆಯಾಗಿ ವಿಚಾರಣಾಧಿಕಾರಿಯಾಗಿ ಶ್ರೀಮತಿ ಕಮಲ, ಭಾ.ಅ.ಸೇ, ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು ಇವರನ್ನು ಮತ್ತು ಮಂಡನಾದಿಕಾರಿಯನ್ನಾಗಿ ಶ್ರೀ ಚಿಕ್ಕಮುತ್ತಯ್ಯ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸುಳ್ಯ ರಬ್ಬರ್ ವಿಭಾಗ, ಸುಳ್ಯ ಇವರನ್ನು ನೇಮಕಾತಿ ಮಾಡಿ ಉಲ್ಲೇಖ (4)ರಲ್ಲಿ ಆದೇಶಿಸಲಾಗಿತ್ತು.

ವಿಚಾರಣಾಧಿಕಾರಿಗಳಾದ ಶ್ರೀಮತಿ ಕಮಲ, ಭಾ.ಅ.ಸೇ, ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು, ಇವರು ಇಲಾಖಾ ವಿಚಾರಣೆಯನ್ನು ನಿಗಮದ ಸೇವಾ ನಿಯಮಗಳ ಪ್ರಕಾರ ನಡೆಸಿ ವಿಚಾರಣಾ ವರದಿಯನ್ನು ಶಿಸ್ತುಪ್ರಾಧಿಕಾರಿಗಳಿಗೆ ಸಲ್ಲಿಸಿದ್ದಾರೆ.

ವಿಚಾರಣಾಧಿಕಾರಿಗಳ ವರದಿಯಂತೆ ಅವರು ಈ ಕೆಳಕಂಡ ದಿನಾಂಕಗಳಂದು ವಿಚಾರಣೆ ನಡೆಸಿದ್ದಾರೆ.

| ದಿನಾಂಕ | | ವಿವರ |
|---|---|---|
| 21-12-2020 | 1. | ಮಂಡನಾಧಿಕಾರಿ ಶ್ರೀ ಚಿಕ್ಕಮುತ್ತಯ್ಯ ಹಾಜರಿರುತ್ತಾರೆ |
| | 2. | **ಮೊದಲನೇ ಸಾಕ್ಷಿದಾರರಾದ ಶ್ರೀ ಬಿ. ಶಿವರಾಜು ಹಾಜರಾಗಿರುವುದಿಲ್ಲ.** |
| | 3. | ಆರೋಪಿತ ನೌಕರ ಶ್ರೀ ಎಂ.ಪಾಪೇಗೌಡ ಗೈರುಹಾಜರಾಗಿರುತ್ತಾರೆ. |
| 04-01-2021 | 1. | ಮಂಡನಾಧಿಕಾರಿ ಶ್ರೀ ಚಿಕ್ಕಮುತ್ತಯ್ಯ ಹಾಜರಿರುತ್ತಾರೆ |
| | 2. | ಮೊದಲನೇ ಸಾಕ್ಷಿದಾರರಾದ ಶ್ರೀ ಬಿ. ಶಿವರಾಜು ಹಾಜರಿರುತ್ತಾರೆ. |
| | 3. | ಎರಡನೇ ಸಾಕ್ಷಿದಾರರಾದ ಶ್ರೀ ಪಿ. ಸತೀಶ್ ಹಾಜರಿರುತ್ತಾರೆ. |
| | 4. | ಆರೋಪಿತ ನೌಕರ ಶ್ರೀ ಎಂ.ಪಾಪೇಗೌಡ ಗೈರುಹಾಜರಾಗಿರುತ್ತಾರೆ. |
| 12-01-2021 | 1. | ಮಂಡನಾಧಿಕಾರಿ ಶ್ರೀ ಚಿಕ್ಕಮುತ್ತಯ್ಯ ಹಾಜರಿರುತ್ತಾರೆ |
| | 2. | ಮೊದಲನೇ ಸಾಕ್ಷಿದಾರರಾದ ಶ್ರೀ ಬಿ. ಶಿವರಾಜು ಹಾಜರಿರುತ್ತಾರೆ. |



Madhu Sharma
30/01/21

| | |
|---|---|
| 3. | ಎರಡನೇ ಸಾಕ್ಷಿದಾರರಾದ ಶ್ರೀ ಪಿ. ಸತೀಶ್ ಹಾಜರಿರುತ್ತಾರೆ. |
| 4. | ಆರೋಪಿತ ನೌಕರ ಶ್ರೀ ಎಂ.ಪಾಪೇಗೌಡ ಗೈರುಹಾಜರಾಗಿರುತ್ತಾರೆ. |

ಸದರಿ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ನಿಗಮದಲ್ಲಿ ಜಾರಿಯಲ್ಲಿರುವ ನಿಯಮಗಳ ಅನುಸಾರ ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966 ರ ನಿಯಮ 11 ಗಳ ಪ್ರಕಾರ ಕೂಲಂಕಷವಾಗಿ ವಿಚಾರಣೆಯನ್ನು ನಡೆಸಿರುತ್ತಾರೆ. ವಿಚಾರಣೆ ವರದಿಯಲ್ಲಿ ಒಳಗೊಂಡ ಅಂಶಗಳನ್ನು ಈ ಕೆಳಕಂಡಂತೆ ಗಮನಿಸಲಾಗಿದೆ.

ಆರೋಪಿತ ನೌಕರರ ಪ್ರಕರಣದಲ್ಲಿ ಈ ಕೆಳಕಂಡ ಆರೋಪಗಳನ್ನು ಹೊರಿಸಿ ಈ ಮೇಲಿನ ಆರೋಪಗಳ ಮೂಲಕ ಆರೋಪಿತ ನೌಕರರು ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966 ರ ನಿಯಮ 3(1) i, ii, iii , 9(i)(ii) ಹಾಗೂ ನಿಗಮದ ಸೇವಾ ನಿಯಮಾವಳಿಯ ನಿಯಮ ಸಂಖ್ಯೆ 24, 25, 26 ಮತ್ತು 27 ಹಾಗೂ 29ನ್ನು ಉಲ್ಲಂಘನೆ ಮಾಡಿರುವುದಾಗಿ ಆಪಾದಿಸಲಾಗಿದೆ.

**ಆರೋಪಗಳು:**

1. ಶ್ರೀ. ಎಂ. ಪಾಪೇಗೌಡ, ಇವರು ಕೇಂದ್ರ ಕಛೇರಿಯಲ್ಲಿ ಪ್ರಭಾರ ಅಧೀಕ್ಷಕರಾಗಿ ದಿನಾಂಕ 04.06.2019 ರಂದು ಕಾರ್ಯವರದಿ ಮಾಡಿಕೊಂಡ ನಂತರ ಕೇಂದ್ರ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ ಕಅನಿನಿ/ಎ1/ಸಿಬ್ಬಂದಿ/2019-20/379 ದಿನಾಂಕ 12.06.2019 ರಲ್ಲಿ ರಜೆ, ವೇತನ ಬಡ್ತಿ, ಪ್ರಯಾಣ ಭತ್ಯೆ ಇತ್ಯಾದಿ ಕೆಲಸ ಕಾರ್ಯಗಳ ಹಂಚಿಕೆಯನ್ನು ಮಾಡಲಾಗಿರುತ್ತದೆ. ಅವರಿಗೆ ವಹಿಸಿರುವ ಖಾತೆಯ ಪ್ರಭಾರವನ್ನು ವಹಿಸಿಕೊಂಡ ನಂತರ ಖಾಲಿಯಿರುವ ಅಧೀಕ್ಷಕರ ಸ್ಥಳದಲ್ಲಿ ಕುಳಿತು ಕೆಲಸ ನಿರ್ವಹಿಸುವ ಬದಲು, ಕಛೇರಿ ವ್ಯವಸ್ಥಾಪಕರಿಗೆ ಮೀಸಲಿರಿಸಿರುವ ಕೊಠಡಿಯಲ್ಲಿ ಮೇಲಾಧಿಕಾರಿಯವರ ಅನುಮತಿಯನ್ನು ಪಡೆಯದೆ ಕುಳಿತು ಕೆಲಸ ನಿರ್ವಹಿಸಿರುವ ಬಗ್ಗೆ ಅವರ ಸಮಜಾಯಿಷಿಯನ್ನ ನೀಡಲು ದಿನಾಂಕ 26.06.2019 ರಂದು ಮೆಮೋ ನೀಡಲಾಗಿರುತ್ತದೆ. ಸದರಿ ಮೆಮೋಗೆ ದಿನಾಂಕ 04.07.2019ರಲ್ಲಿ ನೀಡಿದ ಸಮಜಾಯಿಷಿಯಲ್ಲಿ ದಿನಾಂಕ 14.06.2019 ರಿಂದ ಖಾಲಿ ಇರುವ ಕಛೇರಿ ವ್ಯವಸ್ಥಾಪಕರು ಕೂರುತ್ತಿದ್ದ ಕೊಠಡಿಯಲ್ಲಿ ಕುಳಿತು ಅವರಿಗೆ ವಹಿಸಿದ ಕರ್ತವ್ಯಗಳನ್ನು ನಿರ್ವಹಿಸಿರುತ್ತೇನೆ ಎಂದು ಬೇಜವಾಬ್ದಾರಿಯುತವಾದ ಉತ್ತರವನ್ನು ನೀಡುವ ಮೂಲಕ ಮೇಲಾಧಿಕಾರಿಯವರ ಆದೇಶವನ್ನು ಉಲ್ಲಂಘನೆ ಮಾಡಿರುವುದು.
2. ಕಛೇರಿ ಸಮಯದ ವೇಳೆಯಲ್ಲಿ ಅವರಿಗೆ ಕಛೇರಿಯಲ್ಲಿ ನೀಡಿರುವ ಕರ್ತವ್ಯವನ್ನು ನಿರ್ವಹಿಸುವುದನ್ನು ಬಿಟ್ಟು, ಮೇಲಾಧಿಕಾರಿಗಳ ಅನುಮತಿ ಇಲ್ಲದೆ ಹಾಗೂ ಚಲನವಲನ ಮಸ್ತಕದಲ್ಲಿ ನಮೂದಿಸದೆ ದಿನಾಂಕ 16.10.2019 ರಂದು ಅರಣ್ಯ ಇಲಾಖೆಯಲ್ಲಿ ರಬ್ಬರ್ ವಿಭಾಗದ ಕಾರ್ಮಿಕ ಸಂಘಗಳ ಹಾಗೂ ನಿಗಮದ ನಡುವೆ ಒಪ್ಪಂದ ಮಾಡಿಕೊಳ್ಳುವ ಕುರಿತು ಕರೆದಿರುವ ಸಭೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು ಭಾಗವಹಿಸಿ ಹಿಂತಿರುಗುವಾಗ ಅವರನ್ನು ಅರಣ್ಯ ಇಲಾಖೆಯ ಕಛೇರಿಯಲ್ಲಿ ಕಂಡುಬಂದಾಗ ಕಛೇರಿ ವೇಳೆಯಲ್ಲಿ ಅವರಿಗೆ ವಹಿಸಿರುವ ಕೆಲಸ ನಿರ್ವಹಿಸುವುದನ್ನು ಬಿಟ್ಟು ಅನ್ಯ ಕಛೇರಿಯಲ್ಲಿ ತಿರುಗಾಡಬಾರದೆಂದು ಮೌಖಿಕವಾಗಿ ಎಚ್ಚರಿಕೆ ನೀಡಿದ್ದರು. ಆದರೆ ಮತ್ತೆ ದಿನಾಂಕ 13.02.2020 ರಂದು ಕಛೇರಿಯಲ್ಲಿ ಅನಧಿಕೃತವಾಗಿ ಗೈರುಹಾಜರಾಗಿರುವುದನ್ನು ಕಂಡು ಬಂದ ಹಿನ್ನೆಲೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರ ಕಛೇರಿ ಜ್ಞಾಪನ ಸಂಖ್ಯೆ 1819 ದಿನಾಂಕ 18.02.2020 ರಂತೆ ಮೆಮೋ ನೀಡಲಾಗಿರುತ್ತದೆ ಮತ್ತು ಸದ್ರಿ ದಿನದ ಅನಧಿಕೃತ ಗೈರು ಹಾಜರಿಯನ್ನು ವೇತನ ರಹಿತ ರಜೆಯೆಂದು ಪರಿಗಣಿಸಿ ಆದೇಶಿಸಲಾಗಿರುತ್ತದೆ. ಕರ್ತವ್ಯದಲ್ಲಿ ಶಿಸ್ತನ್ನು ತೋರಿಸದೆ ಹಾಗೂ ನಿಗಮದ ನಿಯಮಗಳನ್ನು ಪಾಲಿಸದೆ ಮೇಲಾಧಿಕಾರಿಗಳ ಅನುಮತಿ ಇಲ್ಲದೆ ಕೆಲಸದ ಸಮಯದಲ್ಲಿ ಸ್ಥಳವನ್ನು ಬಿಟ್ಟು ಹೊರಹೋಗುವುದು, ನಿಗಮದ ಪ್ರತಿಷ್ಠೆಗೆ ಧಕ್ಕೆಯಾಗುವ ರೀತಿಯ ಚಟುವಟಿಕೆಗಳನ್ನು ನಡೆಸುವ ಮೂಲಕ ಇವರು ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966 ನಿಗಮದ ಸೇವಾ ನಿಯಮಾವಳಿಯ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು.

Madhu Sharma
30/01/21

3. ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ಸುಬಾಬುಲ್ ಮತ್ತು ಕ್ಯಾಸುರಿನಾ ನೆಡುತೋಪುಗಳನ್ನು ಬೆಳೆಸುವ ನಿಗಮದ ಯೋಜನೆಯ ವಿರುದ್ಧ ಅವರ ಕಾರ್ಯವ್ಯಾಪ್ತಿ ಮೀರಿ ದಿನಾಂಕ 24.01.2020 ರಂದು ಸರ್ಕಾರಕ್ಕೆ ಹಾಗೂ ನಿಗಮದ ಅಧ್ಯಕ್ಷರಿಗೆ ನೇರವಾಗಿ ಪತ್ರ ಬರೆದು ನಿಗಮವು ವಿವಿಧ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಕ್ರಮಗಳನ್ನು ಮರುಪರಿಶೀಲಿಸುವಂತೆ ಒತ್ತಾಯಿಸುವ ಮೂಲಕ ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966ರ ನಿಯಮ 3(1)(ii)(iii) ಹಾಗೂ ನಿಗಮದ ಸೇವಾ ನಿಯಮಾವಳಿಯ ಸಂ. 24, 25, 26 ಮತ್ತು 27ರ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು.

4. ಸಕಲೇಶಪುರ ತಾಲ್ಲೂಕು ಬ್ಯಾಗಡಿಹಳ್ಳಿ ಗ್ರಾಮದ ಸರ್ವೆ ನಂಬ್ರ 32 ರ 52 ಎಕರೆ ಅರಣ್ಯ ಪ್ರದೇಶವನ್ನು ನಿಗಮವು ಅನಧಿಕೃತವಾಗಿ ಭೂ ಮಾಫಿಯದವರಿಗೆ ಪರಬಾರೆ ಮಾಡಿರುತ್ತಾರೆಂದು ಕೇಂದ್ರೀಯ ಅಧಿಕಾರಯುಕ್ತ ಸಮಿತಿ, ನವದೆಹಲಿಗೆ ದಿನಾಂಕ 16.01.2019 ಮತ್ತು 11.02.2020 ರಂದು ಸುಳ್ಳು ದೂರರ್ಜಿಗಳನ್ನು ಸಲ್ಲಿಸಿರುವುದಲ್ಲದೇ ಇದೇ ವಿಚಾರದಲ್ಲಿ ಸಿ.ಬಿ.ಐ ತನಿಖೆ ನಡೆಸಲು ಆದೇಶಿಸುವಂತೆ ಕೋರಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 9616/2019 (ಪಿ.ಐ.ಎಲ್)ನ್ನು ದಿನಾಂಕ 09.09.2019 ರಂದು ದಾಖಲಿಸಿರುವುದು. ವ್ಯವಸ್ಥಾಪಕ ನಿರ್ದೇಶಕರವರು ಭೂ ಮಾಫಿಯದಾರರಿಗೆ ಅಕ್ರಮವಾಗಿ ಭೂಮಿ ಹಂಚಿಕೆ ಮಾಡಿರುವುದಾಗಿ ಲೋಕಾಯುಕ್ತ ತನಿಖೆ ನಡೆಸುವಂತೆ ಕೋರಿ ದಿನಾಂಕ 19.09.2019 ರಂದು ದೂರರ್ಜಿ ಸಂಖ್ಯೆ 2586/2019 ರಂತೆ ಮಾನ್ಯ ಕರ್ನಾಟಕ ಲೋಕಾಯುಕ್ತರಲ್ಲಿ ದೂರರ್ಜಿ ದಾಖಲಿಸಿರುವುದು. ವಾಸ್ತವವಾಗಿ ಈ ಪ್ರಕರಣ ಕುರಿತು ಈಗಾಗಲೇ ನಿಗಮದಲ್ಲಿ ಆಂತರಿಕ ವಿಚಾರಣೆ ನಡೆದಿದ್ದು, ಬ್ಯಾಗಡಿಹಳ್ಳಿ ಸರ್ವೆ ನಂ. 32 ರಲ್ಲಿ ಕಂದಾಯ ಇಲಾಖೆಯವರು ಭೂಮಿಯನ್ನು ಯಾರಿಗೂ ಮಂಜೂರು ಮಾಡಿಲ್ಲವೆಂದು ದೃಢಪಟ್ಟಿರುವುದು ಆರೋಪಿತ ಸಿಬ್ಬಂದಿಗೆ ಖಚಿತವಾಗಿ ತಿಳಿದಿದ್ದರೂ ಸಹ ಅರಣ್ಯ ಪ್ರದೇಶವನ್ನು 13 ಭೂ ಮಾಫಿಯದವರಿಗೆ ಪರಭಾರೆ ಮಾಡಿ ಅರಣ್ಯ (ಸಂರಕ್ಷಣೆ) ಕಾಯ್ದೆ, 1980 ರ ವಿರುದ್ಧವಾಗಿ ನಡೆದುಕೊಂಡಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳುವ ಕುರಿತು ದಿನಾಂಕ 09.08.2019 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ದೂರರ್ಜಿ ಸಲ್ಲಿಸುವ ಮೂಲಕ ನಿಗಮದ ವಿರುದ್ಧ ಇಲ್ಲ ಸಲ್ಲದ ಸುಳ್ಳು ಆರೋಪವನ್ನು ಹೊರೆಸಿ ನಿಗಮವನ್ನು ಇಕ್ಕಟ್ಟಿನ ಪರಿಸ್ಥಿತಿಗೆ ದೂಡಿರುವುದಲ್ಲದೆ ಅವರ ಈ ವರ್ತನೆಯಿಂದ ನಿಗಮಕ್ಕೆ ಸಮಯ ಮತ್ತು ಆರ್ಥಿಕ ನಷ್ಟ ಉಂಟು ಮಾಡುವುದರ ಜೊತೆಗೆ ಉದ್ದೇಶಪೂರ್ವಕವಾಗಿ ಆಡಳಿತ ವರ್ಗಕ್ಕೆ ತೊಂದರೆ ನೀಡುವುದರ ಮೂಲಕ ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966ರ ನಿಯಮ 3(1)(iii) ಹಾಗೂ ನಿಗಮದ ಸೇವಾ ನಿಯಮಾವಳಿ ಸಂ. 25, 26 ಮತ್ತು 27ನ್ನು ಉಲ್ಲಂಘನೆ ಮಾಡಿರುವುದು.

5. ಚಿಕ್ಕಮಗಳೂರು ವಿಭಾಗೀಯ ವ್ಯವಸ್ಥಾಪಕರ ಕಛೇರಿಯ ಪ್ರಭಾರ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಿಗಮದ ಆಂತರಿಕ ವಿಷಯಗಳ ಕುರಿತು ನೇರವಾಗಿ ಅಥವಾ ಪರೋಕ್ಷವಾಗಿ ಮಾಧ್ಯಮಗಳಿಗೆ ಮೇಲಾಧಿಕಾರಿಗಳ ಅನುಮತಿ ಇಲ್ಲದೆ ಚಿಕ್ಕಮಗಳೂರು ವಿಭಾಗೀಯ ವ್ಯವಸ್ಥಾಪಕರ ಕಛೇರಿಯ ಮುಂದೆಯೇ ಬ್ಯಾಗಡಿಹಳ್ಳಿ ಗ್ರಾಮದ ಸರ್ವೆ ನಂಬ್ರ 32 ರ 52 ಎಕರೆ ಅರಣ್ಯ ಪ್ರದೇಶವನ್ನು ಅಕ್ರಮವಾಗಿ ಭೂ ಮಾಫಿಯದಾರರಿಗೆ ಭೂಮಿ ಪರಬಾರೆ ಮಾಡಿರುತ್ತಾರೆಂದು ನಿಗಮದ ಮೇಲಾಧಿಕಾರಿಗಳ ವಿರುದ್ಧವೇ ಬಿ.ಟಿ.ವಿ ಕನ್ನಡ ಚಾನಲ್‌ಗೆ ಸಂದರ್ಶನವನ್ನು ನೀಡುತ್ತಾ, ನಿಗಮದ ಕುರಿತಂತೆ ಸುಳ್ಳು ಮಾಹಿತಿಗಳನ್ನು ಮಾಧ್ಯಮಗಳಿಗೆ ನೀಡಿ ನಿಗಮದ ಪ್ರತಿಷ್ಠೆಗೆ ಧಕ್ಕೆ ಉಂಟು ಮಾಡುವುದರ ಮೂಲಕ ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966 ರ ನಿಯಮ 9 ಹಾಗೂ ನಿಗಮದ ಸೇವಾ ನಿಯಮಾವಳಿ ಸಂ.29ನ್ನು ಉಲ್ಲಂಘನೆ ಮಾಡಿರುವುದು.

6. ಬೆಂಗಳೂರು ವಿಭಾಗೀಯ ವ್ಯವಸ್ಥಾಪಕ ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಕರ್ತವ್ಯದಲ್ಲಿ ಬೇಜವಾಬ್ದಾರಿ ನಿರ್ಲಕ್ಷತೆ ಮತ್ತು ಕರ್ತವ್ಯ ಲೋಪದ ಆರೋಪಗಳ ಮೇಲೆ ದಿನಾಂಕ 27.12.2016 ರಂದು ಇವರನ್ನು ಅಮಾನತ್ತುಪಡಿಸಲಾಗಿರುತ್ತದೆ. ಸದರಿ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ವ್ಯವಸ್ಥಾಪಕ ನಿರ್ದೇಶಕರು, ಕಅಅನಿನಿ ಬೆಂಗಳೂರು ಇವರ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ 1842 ದಿನಾಂಕ 29.11.2017 ರಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ ಸೇವಾ ನಿಯಮಾವಳಿ ನಿಯಮ 46(1) (ii) ರಂತೆ ಖಂಡಿಸಿ ವಾಗ್ದಂಡನೆ ವಿಧಿಸಲಾಗಿರುತ್ತದೆ. ಅವರ ನಡತೆಯನ್ನು ಸುಧಾರಿಸಿಕೊಳ್ಳಲು ಸಾಕಷ್ಟು ಅವಕಾಶ ನೀಡಿದ್ದರೂ ಸಹ ಅವರ ವರ್ತನೆ ಮತ್ತು ಕರ್ತವ್ಯದಲ್ಲಿ ಶಿಸ್ತನ್ನು

Madhu Sharma
30/01/21

ತೋರಿಸದೆ ಹಾಗೂ ನಿಗಮದ ನಿಯಮಗಳನ್ನು ಪಾಲಿಸದೆ ನಿಗಮದ ಪ್ರತಿಷ್ಠೆಗೆ ಧಕ್ಕೆಯಾಗುವ ರೀತಿಯಲ್ಲಿ ಚಟುವಟಿಕೆಗಳನ್ನು ನಡೆಸುವುದು. ನಿಗಮದ ವಿರುದ್ಧ ಟಿ.ವಿ ಮತ್ತು ಇತರೆ ಮಾಧ್ಯಮಗಳಲ್ಲಿ ಸುಳ್ಳು ಮಾಹಿತಿ ನೀಡುವುದು ಇವರು ವಾಡಿಕೆ ಮಾಡಿಕೊಂಡಿರುತ್ತಾರೆ. ಇದರ ಬಗ್ಗೆ ಹಲವಾರು ಬಾರಿ ಎಚ್ಚರಿಕೆ ನೀಡಿ ನಡತೆಯನ್ನು ಸುಧಾರಿಸಿಕೊಳ್ಳಲು ಸಾಕಷ್ಟು ಅವಕಾಶ ನೀಡಿದ್ದರೂ ಸಹ ಅವರ ವರ್ತನೆಯಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳದೇ ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966 ರ ನಿಯಮ 3(1)(i)(ii)(iii), 9(i) (ii) ಹಾಗೂ ನಿಗಮದ ಸೇವಾ ನಿಯಮಾವಳಿ ಸಂ. 24, 25, 26, 27 ಮತ್ತು 29ನ್ನು ಉಲ್ಲಂಘನೆ ಮಾಡಿರುವುದು.

ಈ ಪ್ರಕರಣದಲ್ಲಿ ಆರೋಪಿತ ನೌಕರರು ವಿಚಾರಣೆ ~~ನಡೆದ ಮೂರೂ~~ (3) ದಿನಾಂಕಗಳಂದು ವಿಚಾರಣೆಗೆ ಗೈರುಹಾಜರಾಗಿರುತ್ತಾರೆ.

ವಿಚಾರಣೆ ಪ್ರಕ್ರಿಯೆಯ ಮಹತ್ವದ ಅಂಶಗಳು ಈ ಕೆಳಕಂಡಂತಿವೆ :-

1. ಆಪಾದನೆಗಳ ಬಗ್ಗೆ ಮೊದಲನೇ ವಿಚಾರಣೆಯನ್ನು ದಿನಾಂಕ 21-12-2020 ರಂದು ಪ್ರಾರಂಭಿಸಲಾಯಿತು. ಸದರಿ ವಿಚಾರಣಾ ದಿನದಂದು ಶ್ರೀ. ಚಿಕ್ಕಮುತ್ತಯ್ಯ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸುಳ್ಯ ಇವರು ಹಾಜರಿದ್ದು ದಾವೆಯನ್ನು ವಿಚಾರಣೆಗೆ ಮಂಡಿಸಿದ್ದರು. ನಿಗಮದ ಪರ (1)ನೇ ಸಾಕ್ಷಿದಾರರಾದ ಶ್ರೀ.ಬಿ.ಶಿವರಾಜು, ಕಛೇರಿ ವ್ಯವಸ್ಥಾಪಕರು, ಕೇಂದ್ರ ಕಛೇರಿ ಬೆಂಗಳೂರು ಅವರ ತಾಯಿ ದಿನಾಂಕ: 20-12-2020 ರಂದು ನಿಧನರಾಗಿರುವುದರಿಂದ ದಿನಾಂಕ: 21-12-2020ರಂದು ವಿಚಾರಣೆಗೆ ಹಾಜರಾಗಲು ಸಾಧ್ಯವಾಗಿರುವುದಿಲ್ಲ. ಆರೋಪಿತ ನೌಕರರು ವಿಚಾರಣೆಯನ್ನು ಮಂಗಳೂರಿನ ಬದಲು ಬೆಂಗಳೂರು ಕಛೇರಿಯಲ್ಲಿ ನಿಗದಿಪಡಿಸಲು ಕೇಳಿಕೊಂಡಿದ್ದು, ಅವರ ಮನವಿಯನ್ನು ವಿಚಾರಣಾಧಿಕಾರಿಗಳು ತಿರಸ್ಕರಿಸಿ, ಮುಂದಿನ ವಿಚಾರಣೆಯನ್ನು ದಿನಾಂಕ: 04-01-2021ಕ್ಕೆ ನಿಗದಿಪಡಿಸಿದ್ದಾರೆ. ವಿಚಾರಣಾಧಿಕಾರಿಗಳು ಮಂಡನಾ ಪರ (1)ನೇ ಸಾಕ್ಷಿದಾರರಾದ ಶ್ರೀ.ಬಿ.ಶಿವರಾಜು, ಕಛೇರಿ ವ್ಯವಸ್ಥಾಪಕರು, ಹಾಗೂ (2)ನೇ ಸಾಕ್ಷಿದಾರರಾದ ಶ್ರೀ ಸತೀಶ.ಪಿ. ಗಣಕಯಂತ್ರ ಮೇಲ್ವಿಚಾರಕರು, ಕೇಂದ್ರ ಕಛೇರಿ ಬೆಂಗಳೂರು ಇವರುಗಳಿಗೆ ಹಾಗೂ ಆರೋಪಿತ ಸಿಬ್ಬಂದಿ ಶ್ರೀ.ಪಾಪೇಗೌಡರಿಗೂ ನೋಟೀಸು ಜಾರಿ ಮಾಡಲಾಗಿರುತ್ತದೆ.
2. ದಿನಾಂಕ : 04-01-2021ರಂದು ಮಂಡನಾ ಪರ (1)ನೇ ಹಾಗೂ (2)ನೇ ಸಾಕ್ಷಿದಾರರು ಹಾಜರಿದ್ದರು. ಆದರೆ ಆರೋಪಿತ ಸಿಬ್ಬಂದಿ ಶ್ರೀ.ಪಾಪೇಗೌಡರು ದಿನಾಂಕ: 30-12-2020ರಂದು ನೋಟೀಸನ್ನು ಸ್ವೀಕರಿಸಿದ್ದರೂ ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ. ಮಂಡನಾಧಿಕಾರಿಯವರು ದಾವೆಯನ್ನು ಮಂಡಿಸಿ ಮಂಡನಾ ಪರ (1)ನೇ ಹಾಗೂ (2)ನೇ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿ, ಅವರುಗಳ ಸಾಕ್ಷಿ ಹೇಳಿಕೆಗಳನ್ನು ದಾಖಲಿಸಲಾಯಿತು ಹಾಗೂ ಆರೋಪದ ಪರ 15 ದಾಖಲೆಗಳನ್ನು ಗುರುತಿಸಲಾಯಿತು. ಆದರೆ ಆರೋಪಿತ ಸಿಬ್ಬಂದಿಯಾಗಲೀ ಅವರ ರಕ್ಷಣಾ ಸಹಾಯಕರಾಗಲೀ ಗೈರುಹಾಜರಾದ ಕಾರಣ ಪಾಟಿ ಸವಾಲು ಇಲ್ಲವೆಂದು ಪರಿಗಣಿಸಿ ಮುಂದಿನ ವಿಚಾರಣೆಯನ್ನು ದಿನಾಂಕ: 12-01-2021ಕ್ಕೆ ನಿಗದಿಪಡಿಸಿ ಮಂಡನಾ ಪರ (1)ನೇ ಹಾಗೂ (2)ನೇ ಸಾಕ್ಷಿದಾರರಿಗೂ ಹಾಗೂ ಆರೋಪಿತ ಸಿಬ್ಬಂದಿ ಶ್ರೀ.ಪಾಪೇಗೌಡರಿಗೂ ನೋಟೀಸು ಜಾರಿ ಮಾಡಲಾಯಿತು. ಆರೋಪಿತರಿಗೆ ಜಾರಿ ಮಾಡಲಾದ ಈ ನೋಟೀಸಿನಲ್ಲಿ ದಿನಾಂಕ: 12-1-2021 ರ ವಿಚಾರಣೆಯು ಮಂಡನಾ ಪರ (1)ನೇ ಹಾಗೂ (2)ನೇ ಸಾಕ್ಷಿದಾರರುಗಳ ಪಾಟಿ ಸವಾಲು ಹಾಗೂ ಹಾಗೂ ಆರೋಪಿತ ಸಿಬ್ಬಂದಿ ಪರ ಸಾಕ್ಷಿ ವಿಚಾರಣೆಗೆ ನಿಗದಿಪಡಿಸಿದೆ ಎಂದು ತಿಳಿಸಿ ಸದ್ರಿ ದಿನದಂದು ಅವರು ಮತ್ತೆ ಗೈರುಹಾಜರಾದ ಪಕ್ಷದಲ್ಲಿ ಅವರ ಮೇಲಿರುವ ಆರೋಪಗಳಿಗೆ ಸಂಬಂಧಿಸಿದಂತೆ ಅವರಿಗೆ ಹೇಳಲು ಏನೂ ಇರುವುದಿಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ವಿಚಾರಣೆಯನ್ನು ಅಂತಿಮಗೊಳಿಸಲಾಗುವುದೆಂದು ತಿಳಿಸಲಾಗಿತ್ತು. ಸದ್ರಿ ನೋಟೀಸನ್ನು ಅವರು ದಿನಾಂಕ : 07-01-2021 ರಂದು ಸ್ವೀಕರಿಸಿದ್ದರು. ಹೀಗಿದ್ದರೂ ಆರೋಪಿತ ಸಿಬ್ಬಂದಿಯು 3ನೇ ಬಾರಿಯ ವಿಚಾರಣೆಗೂ ಗೈರು ಹಾಜರಾಗಿದ್ದು ಅವರ ಗೈರುಹಾಜರಿಯ ಬಗ್ಗೆ ವಿಚಾರಣಾಧಿಕಾರಿಯವರಿಗೆ ಯಾವುದೇ ವಿಷಯವನ್ನು ತಿಳಿಸಿರುವುದಿಲ್ಲ.

Madhu Sharma
30/01/21

ಇದರಿಂದಾಗಿ ಆರೋಪಿತ ಸಿಬ್ಬಂದಿಯಿಂದ ಆರೋಪದ ಬಗ್ಗೆ ಹೇಳಿಕೆ ಏನು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ (Exparte) ವಿಚಾರಣೆಯನ್ನು ಮುಕ್ತಾಯಗೊಳಿಸಲು ಹಾಗೂ ಶಿಸ್ತು ಪ್ರಾಧಿಕಾರಕ್ಕೆ ವರದಿ ಸಲ್ಲಿಸಲು ತೀರ್ಮಾನಿಸಲಾಯಿತು. ನೀಡಲಾಗಿರುವ ಎಲ್ಲಾ ನೋಟೀಸುಗಳನ್ನು ಆರೋಪಿತ ಸಿಬ್ಬಂದಿಯು ವಿಚಾರಣಾ ದಿನಾಂಕಗಳ ಮೊದಲೇ ಸ್ವೀಕರಿಸಿದ್ದರೂ ಎಲ್ಲಾ ದಿನಾಂಕಗಳಂದೂ ವಿಚಾರಣಾಧಿಕಾರಿವರಿಗೆ ಯಾವುದೇ ವಿಚಾರವನ್ನು ತಿಳಿಸದೇ ಗೈರು ಹಾಜರಾದ ಕಾರಣ, ವಿಚಾರಣೆಯನ್ನು ಏಕಪಕ್ಷೀಯವಾಗಿ (Exparte) ಮುಕ್ತಾಯಗೊಳಿಸುವ ಅನಿವಾರ್ಯತೆಯು ಉಂಟಾಗಿರುತ್ತದೆ.

3. ಮಂಡನಾ ಪರ (1)ನೇ ಹಾಗೂ (2)ನೇ ಸಾಕ್ಷಿದಾರರುಗಳು ದಿನಾಂಕ: 04-01-2021 ರಂದು ವಿಚಾರಣಾಧಿಕಾರಿಯವರ ಸಮಕ್ಷಮ ನೀಡಿರುವ ಸಾಕ್ಷಿ ಹೇಳಿಕೆಯು ಈ ಕೆಳಗಿನಂತಿರುತ್ತದೆ.

ಆರೋಪಿತ ಸಿಬ್ಬಂದಿಯ ಮೇಲಿರುವ ಆರೋಪಗಳ ಬಗ್ಗೆ ಮಂಡನಾ ಪರ (1)ನೇ ಹಾಗೂ (2)ನೇ ಸಾಕ್ಷಿದಾರರುಗಳು ದಿನಾಂಕ: 04-01-2021 ರಂದು ವಿಚಾರಣಾಧಿಕಾರಿಯವರ ಸಮಕ್ಷಮ ನೀಡಿರುವ ಸಾಕ್ಷಿ ಹೇಳಿಕೆಯು ಈ ಕೆಳಗಿನಂತಿರುತ್ತದೆ.

ಪಿಡಬ್ಲ್ಯು –1. ಶ್ರೀ.ಶಿವರಾಜು, ಕಛೇರಿ ವ್ಯವಸ್ಥಾಪಕರು, ಕೇಂದ್ರ ಕಛೇರಿ ಬೆಂಗಳೂರು :

" ನಾನು 2009–2010 ನೇ ಇಸವಿಯಿಂದ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಕಛೇರಿಯಲ್ಲಿ ಅಧೀಕ್ಷಕರು ಹಾಗೂ ಕಛೇರಿ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ದಿನ ಶ್ರೀ. ಎಂ. ಪಾಪೇಗೌಡ ಇವರ ವಿರುದ್ಧ ಮಾಡಲಾಗಿರುವ ದೋಷಾರೋಪಣೆಗಳ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಈ ವಿಚಾರದಲ್ಲಿ ನನಗೆ ತಿಳಿಸಿರುವ ಹಾಗೂ ನಾನು ನೋಡಿರುವ ದಾಖಲೆಗಳಿಗೆ ಸಂಬಂಧಿಸಿದಂತೆ ತಮ್ಮ ಮುಂದೆ ಸಾಕ್ಷ್ಯ ನುಡಿದಿರುತ್ತೇನೆ. ದಿನಾಂಕ 12.06.2019 ರಂದು ಆರೋಪಿತ ಸಿಬ್ಬಂದಿ ಶ್ರೀ. ಎಂ. ಪಾಪೇಗೌಡ ಅವರು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ಕಾರ್ಯ ಹಂಚಿಕೆ ಮಾಡಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಆದೇಶ ಮಾಡಿದ್ದು, ಅದರಂತೆ ಅವರು ಅಧೀಕ್ಷಕರಿಗೆ ಮೀಸಲಿರಿಸಿದ ಆಸನದಲ್ಲಿ ಕುಳಿತು ಕರ್ತವ್ಯ ನಿರ್ವಹಿಸಬೇಕಾಗಿತ್ತು. ಆದರೆ ಆರೋಪಿತ ಸಿಬ್ಬಂದಿಯು ಕಛೇರಿ ಅಧೀಕ್ಷಕರಿಗೆ ಮೀಸಲಿರಿಸಿದ ಆಸನದ ಬದಲು ಕಛೇರಿ ವ್ಯವಸ್ಥಾಪಕರಿಗೆ ಮೀಸಲಿರಿಸಿದ ಆಸನದಲ್ಲಿ ಕುಳಿತು ಕಾರ್ಯ ನಿರ್ವಹಿಸುತ್ತಿದ್ದುದನ್ನು ಗಮನಿಸಿದ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ 26.06.2019 ರಂದು ಮೆಮೋ ಒಂದನ್ನು ನೀಡಿ ಕಛೇರಿ ವ್ಯವಸ್ಥಾಪಕರ ಕೊಠಡಿಯನ್ನು ಅತಿಕ್ರಮಿಸಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಸಮಜಾಯಿಷಿಯನ್ನು ನೀಡಲು ತಿಳಿಸಿ ಅಧೀಕ್ಷಕರ ಆಸನದಲ್ಲಿ ಕುಳಿತು ಕಾರ್ಯ ನಿರ್ವಹಿಸಲು ತಿಳಿಸಿರುತ್ತಾರೆ. ಸದ್ರಿ ಮೆಮೋಗೆ ದಿನಾಂಕ 04.07.2019 ರಂದು ಉತ್ತರಿಸಿದ ಅವರು ಅಧೀಕ್ಷಕರಿಗೆ ಮೀಸಲಿರಿಸಿದ ಸ್ಥಳದಲ್ಲಿ ಕುಳಿತು ಕೆಲಸ ನಿರ್ವಹಿಸುವ ಬದಲು ಕಛೇರಿ ವ್ಯವಸ್ಥಾಪಕರಿಗೆ ಮೀಸಲಿರಿಸಿದ ಕೊಠಡಿಯನ್ನು ಬಳಸಿಕೊಂಡಿರುವುದು ಸರಿಯಾಗಿದೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯಿಂದ ದಿನಾಂಕ 12.06.2019 ರಂದು ನೀಡಿರುವ ಕಾರ್ಯಹಂಚಿಕೆಯ ಆದೇಶವನ್ನು ನಿಶಾನೆ–ಪಿ1 ಎಂದು ದಿನಾಂಕ 26.06.2019 ರಂದು ನೀಡಿರುವ ಮೆಮೋವನ್ನು ನಿಶಾನೆ ಪಿ–2 ಎಂದು ಹಾಗೂ ದಿನಾಂಕ 04.07.2019 ರಂದು ಆರೋಪಿತ ಸಿಬ್ಬಂದಿಯು ನೀಡಿರುವ ಉತ್ತರವನ್ನು ನಿಶಾನೆ ಪಿ–3 ಎಂದು ಗುರುತಿಸಲಾಗಿದೆ. ದಿನಾಂಕ 13.02.2020 ರಂದು ಆರೋಪಿತ ಸಿಬ್ಬಂದಿಯು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕಛೇರಿ ವ್ಯವಸ್ಥಾಪಕರ ಪೂರ್ವಾನುಮತಿ ಇಲ್ಲದೆ ಕಛೇರಿಯಿಂದ ಹೊರಗೆ ತೆರಳಿರುವುದಾಗಿ ಕಂಡುಬಂದಿರುವುದರಿಂದ ದಿನಾಂಕ 18.02.2020 ರಂದು ಶ್ರೀ. ಎಂ. ಪಾಪೇಗೌಡರಿಗೆ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯಿಂದ ಜ್ಞಾಪನಾ ಪತ್ರವೊಂದನ್ನು ನೀಡಿ ಅವರು ಕಛೇರಿಯಿಂದ ಗೈರುಹಾಜರಾದ ಅವಧಿಯನ್ನು ಅನಧಿಕೃತ ಗೈರುಹಾಜರಿಯೆಂದು ಏಕೆ ಪರಿಗಣಿಸಬಾರದೆಂದು ತಿಳಿಸಲಾಗಿರುತ್ತದೆ. ದಿನಾಂಕ 13.02.2020 ರಂದು ಬೆಳಿಗ್ಗೆ ಅವರು ಕಛೇರಿಗೆ ಹಾಜರಾಗಿ ಕಛೇರಿ ಹಾಜರಾತಿ ವಹಿಯಲ್ಲಿ ಸಹಿ ಮಾಡಿರುತ್ತಾರೆ. ತದನಂತರ ಅವರು ಕಛೇರಿ ಬಿಟ್ಟು ಹೊರ ತೆರಳಿರುತ್ತಾರೆ. ದಿನಾಂಕ 18.02.2020 ರಂದು ಶ್ರೀ. ಎಂ. ಪಾಪೇಗೌಡರಿಗೆ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯಿಂದ ನೀಡಿರುವ ಜ್ಞಾಪನಾ ಪತ್ರವನ್ನು ಈಗ ನೋಡುತ್ತಿದ್ದೇನೆ, ಅದನ್ನು ನಿಶಾನೆ ಪಿ–4 ಎಂದು ಗುರುತಿಸಲಾಗಿದೆ. ಅಲ್ಲದೆ



Madhu Sharma
30/01/21

ವ್ಯವಸ್ಥಾಪಕ ನಿರ್ದೇಶಕರು ದಿನಾಂಕ 13.04.2020 ರ ಆದೇಶದಲ್ಲಿ ಅವರು ಕಛೇರಿಯಿಂದ ಗೈರುಹಾಜರಾದ ದಿನಾಂಕ 13.02.2020 ರ ಒಂದು ದಿನವನ್ನು ಅನಧಿಕೃತ ಗೈರುಹಾಜರಾತಿಯೆಂದು ಪರಿಗಣಿಸಿ ಸದ್ರಿ ದಿನವನ್ನು ವೇತನ ರಹಿತ ರಜೆಯೆಂದು ಪರಿಗಣಿಸಿ ಆದೇಶ ನೀಡಿರುತ್ತಾರೆ. ಸದ್ರಿ ಆದೇಶವನ್ನು ಈಗ ನೋಡುತ್ತಿದ್ದು ನಿಶಾನೆ ಪಿ-5 ಎಂದು ಗುರುತಿಸಲಾಯಿತು. ನಿಗಮವು ಸುಬಾಬುಲ್ ಮತ್ತು ಕ್ಯಾಸುರಿನಾ ನೆಡುತೋಪುಗಳನ್ನು ಬೆಳೆಸುವ ನಿಗಮದ ಯೋಜನೆಯ ವಿರುದ್ಧ ಸರಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅಪಜೀ, ಬೆಂಗಳೂರು ಹಾಗೂ ನಿಗಮದ ಅಧ್ಯಕ್ಷರಿಗೆ ಶ್ರೀ. ಎಂ. ಪಾಪೇಗೌಡ ಇವರು ದಿನಾಂಕ 24.01.2020 ರಂದು ದೂರರ್ಜಿಯನ್ನು ಬರೆದಿರುತ್ತಾರೆ. ಸದ್ರಿ ದೂರರ್ಜಿಯು ದಿನಾಂಕ 28.01.2020 ರಂದು ವ್ಯವಸ್ಥಾಪಕ ನಿರ್ದೇಶಕರ ಕಛೇರಿಯಲ್ಲಿ ಸ್ವೀಕೃತವಾಗಿದ್ದು ಅದು ಸ್ವೀಕೃತಿ ವಹಿಯ ಕ್ರಮ ಸಂಖ್ಯೆ 4759 ರಲ್ಲಿ ದಾಖಲಾಗಿರುತ್ತದೆ. ಸದ್ರಿ ಅರ್ಜಿಯನ್ನು ಈಗ ನೋಡುತ್ತಿದ್ದೇನೆ. ಅದರಲ್ಲಿರುವ ಸಹಿಯನ್ನು ಗುರುತಿಸಿದ್ದು ಅದು ಆರೋಪಿತ ಸಿಬ್ಬಂದಿ ಶ್ರೀ. ಎಂ. ಪಾಪೇಗೌಡರದ್ದೇ ಆಗಿರುತ್ತದೆ. ಸದ್ರಿ ದೂರರ್ಜಿಯನ್ನು ನಿಶಾನೆ ಪಿ-6 ಎಂದು ಗುರುತಿಸಲಾಗಿದೆ.

ಶ್ರೀ. ಎಂ. ಪಾಪೇಗೌಡ ಇವರು ದಿನಾಂಕ 16.01.2019 ರಂದು ಹಾಗೂ 11.02.2020 ರಂದು ಕೇಂದ್ರೀಯ ಅಧಿಕಾರಯುಕ್ತ ಸಮಿತಿ, ನವದೆಹಲಿಗೆ ಅರ್ಜಿ ಸಲ್ಲಿಸಿ ಚಿಕ್ಕಮಗಳೂರು ವಿಭಾಗದ ಬ್ಯಾಗಡಿಹಳ್ಳಿ ಗ್ರಾಮದ ಸರ್ವೆ ನಂಬ್ರ 32 ರ 52 ಎಕರೆ ಅರಣ್ಯ ಪ್ರದೇಶವನ್ನು ನಿಗಮದ ಅಧಿಕಾರಿಗಳು ಅಕ್ರಮವಾಗಿ ಭೂ ಮಾಫಿಯದಾರರಿಗೆ ಪರಾಭಾರೆ ಮಾಡಿದೆ ಎಂದು ನಿಗಮದ ಮೇಲಾಧಿಕಾರಿಗಳ ವಿರುದ್ಧ ದೂರರ್ಜಿ ಬರೆದಿರುವುದಾಗಿದೆ. ಸದ್ರಿ ಅರ್ಜಿಯಲ್ಲಿ ಮಾಡಿರುವ ಸಹಿಯನ್ನು ನೋಡಿರುತ್ತೇನೆ. ಅದು ಶ್ರೀ. ಎಂ. ಪಾಪೇಗೌಡರ ಸಹಿಯೇ ಆಗಿರುತ್ತದೆ. ಸದ್ರಿ ಅರ್ಜಿಯನ್ನು ನಿಶಾನೆ ಪಿ-7 ಮತ್ತು ನಿಶಾನೆ ಪಿ-8 ಎಂದು ಗುರುತಿಸಲಾಗಿದೆ. ಅಲ್ಲದೆ ಇದೇ ವಿಚಾರದಲ್ಲಿ ತನಿಖೆ ಮತ್ತು ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳುವಂತೆ ಕೋರಿ ಕರ್ನಾಟಕ ಸರಕಾರದ ಮಾನ್ಯ ಲೋಕಾಯುಕ್ತರಿಗೆ ದಿನಾಂಕ 19.09.2019 ರಂದು ದೂರರ್ಜಿ ಸಲ್ಲಿಸಿರುವುದಾಗಿದೆ. ಸದ್ರಿ ಅರ್ಜಿ ಹಾಗೂ ಈ ಬಗ್ಗೆ ವರದಿ ನೀಡಲು ಲೋಕಾಯುಕ್ತರಿಂದ ಬಂದಿರುವ ಪತ್ರವನ್ನು ಹಾಗೂ ಲೋಕಾಯುಕ್ತರಿಗೆ ಸಲ್ಲಿಸಿರುವ ದೂರರ್ಜಿಯನ್ನು ಈಗ ನೋಡುತ್ತಿದ್ದೇನೆ. ದೂರರ್ಜಿಯಲ್ಲಿ ಮಾಡಿರುವ ಸಹಿಯನ್ನು ಗುರುತಿಸುತ್ತಿದ್ದೇನೆ. ಅದು ಶ್ರೀ. ಎಂ. ಪಾಪೇಗೌಡರ ಸಹಿಯಾಗಿರುತ್ತದೆ. ಈ ಮೂರು ದಾಖಲೆಗಳನ್ನು ನಿಶಾನೆ ಪಿ-10 ಎಂದು ಗುರುತಿಸಲಾಗಿದೆ. ಇದೇ ವಿಚಾರದಲ್ಲಿ ದಿನಾಂಕ 09.08.2019 ರಂದು ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು ಇವರಿಗೆ ದೂರರ್ಜಿಯೊಂದನ್ನು ಬರೆದು ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಬ್ಯಾಗಡಿಹಳ್ಳಿ ಸರ್ವೆ ನಂಬ್ರ 32 ರಲ್ಲಿ 52 ಎಕರೆ ಭೂಮಿಯನ್ನು ಅಕ್ರಮವಾಗಿ ಭೂ ಮಾಫಿಯದವರಿಗೆ ಪರಾಭಾರೆ ಮಾಡುತ್ತಿರುವ ಬಗ್ಗೆ ಅರಣ್ಯ ಇಲಾಖೆ ಮತ್ತು ನಿಗಮದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರರ್ಜಿ ಸಲ್ಲಿಸಿರುತ್ತಾರೆ. ಸದ್ರಿ ದೂರರ್ಜಿಯನ್ನು ಈಗ ನೋಡುತ್ತಿದ್ದೇನೆ. ಅದರಲ್ಲಿರುವ ಸಹಿಯನ್ನು ನೋಡುತ್ತಿದ್ದು ಅದು ಶ್ರೀ. ಎಂ. ಪಾಪೇಗೌಡರ ಸಹಿಯಾಗಿದ್ದು ಸದ್ರಿ ದೂರರ್ಜಿಯನ್ನು ನಿಶಾನೆ ಪಿ-11 ಎಂದು ಗುರುತಿಸಲಾಗಿದೆ. ಅಲ್ಲದೆ ಈ ಭೂ ಅತಿಕ್ರಮಣದ ಬಗ್ಗೆ ಶ್ರೀ. ಎಂ. ಪಾಪೇಗೌಡ ಇವರು ಸಿ.ಬಿ.ಐ ತನಿಖೆ ನಡೆಸುವಂತೆ ಕೋರಿ ಡಬ್ಲ್ಯುಪಿ ನಂ 9616/2019 ರಂತೆ ಕರ್ನಾಟಕ ರಾಜ್ಯದ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ದಾವೆಯೊಂದನ್ನು (ಪಿಐಎಲ್) ದಾಖಲಿಸಿರುತ್ತಾರೆ. ಸದ್ರಿ ರಿಟ್ ದಾವೆಯನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಶಾನೆ ಪಿ-9 ಎಂದು ಗುರುತಿಸಲಾಗಿದೆ. ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದ ನಿಗಮದ ಪರ ನ್ಯಾಯವಾದಿಗಳು ರಿಟ್ ದಾವೆಯು ವಜಾಗೊಂಡಿರುವ ಬಗ್ಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರವೊಂದನ್ನು ಬರೆದು ತಿಳಿಸಿದ್ದು, ಸದ್ರಿ ಪತ್ರವನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಶಾನೆ ಪಿ-9(ಎ) ಎಂದು ಗುರುತಿಸಲಾಗಿದೆ.

ಶ್ರೀ. ಎಂ. ಪಾಪೇಗೌಡ ಇವರು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ ಬೆಂಗಳೂರು ವಿಭಾಗದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯ ನಿರ್ವಹಿಸುವ ಸಮಯದಲ್ಲಿ ದಿನಾಂಕ 07.05.2015 ರಂದು ಹಾಗೂ 24.04.2015 ರಂದು ಟಿವಿ 9 ಕನ್ನಡ ಚಾನಲ್‌ಗೆ ನಿಗಮದ ವಿರುದ್ಧ ಹಾಗೂ ನಿಗಮದ ಅಧಿಕಾರಿಗಳ ವಿರುದ್ಧ ಮಾಡಿರುವ ಆರೋಪಗಳಿಗೆ ಸಂಬಂಧಿಸಿ ದಿನಾಂಕ 12.05.2015 ರಂದು ಆರೋಪಿತ ಸಿಬ್ಬಂದಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನೀಡಿರುವ ಸೂಚನಾ ಪತ್ರ ಕರ್ತವ್ಯದಿಂದ ಅಮಾನತುಗೊಳಿಸಿದ ಆದೇಶ ಹಾಗೂ ಈ ಸಂಬಂಧ ದಿನಾಂಕ 29.11.2017 ರಂದು ಅವರ ಮೇಲಿರುವ



Madhu Sharma
30/01/21

ಆರೋಪವನ್ನು ಮನ್ನಿಸಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ ಸೇವಾ ನಿಯಮಾವಳಿ 46(1)(ii) ರಂತೆ ಅವರ ಈ ವರ್ತನೆಯನ್ನು ಖಂಡಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿರುವ ಆದೇಶಗಳನ್ನು ಈಗ ನೋಡುತ್ತಿದ್ದೇನೆ. ಈ ಆದೇಶಗಳನ್ನು ಕ್ರಮವಾಗಿ ನಿಶಾನೆ ಪಿ-12, 13 ಮತ್ತು 14 ಎಂದು ಗುರುತಿಸಲಾಗಿದೆ. ಅಲ್ಲದೆ ಚಿಕ್ಕಮಗಳೂರು ವಿಭಾಗದ ವಿಭಾಗೀಯ ವ್ಯವಸ್ಥಾಪಕರ ಕಛೇರಿಯ ಮುಂದೆಯೇ ಚಿಕ್ಕಮಗಳೂರು ವಿಭಾಗದ ಬ್ಯಾಗಡಿಹಳ್ಳಿ ಗ್ರಾಮದ ಸರ್ವೆ ನಂಬ್ರ 52 ರ 52 ಎಕರೆ ಅರಣ್ಯ ಪ್ರದೇಶವನ್ನು ಅಕ್ರಮವಾಗಿ ಭೂ ಮಾಫಿಯದಾರರಿಗೆ ಭೂಮಿ ಪರಾಭಾರೆ ಮಾಡಿದೆ ಎಂದು ನಿಗಮದ ಮೇಲಾಧಿಕಾರಿಗಳ ವಿರುದ್ಧವೇ ಬಿಟಿವಿ ಕನ್ನಡ ಚಾನಲ್‌ಗೆ ಸಂದರ್ಶನವನ್ನು ನೀಡಿರುವ ಸಿಡಿಯನ್ನು ವಿಚಾರಣಾಧಿಕಾರಿಯವರ ಸಮಕ್ಷಮದಲ್ಲಿ ಕಂಪ್ಯೂಟರಿಗೆ ಅಳವಡಿಸಿ ದೃಶ್ಯಾವಳಿಯನ್ನು ನೋಡಿರುತ್ತೇನೆ. ಸದ್ರಿ ದೃಶ್ಯಾವಳಿಯಲ್ಲಿ ಮಾತನಾಡಿರುವುದು ಶ್ರೀ. ಎಂ. ಪಾಪೇಗೌಡರೇ ಆಗಿದ್ದು ಮಾತನಾಡಿರುವ ಸ್ಥಳವು ಚಿಕ್ಕಮಗಳೂರು ವಿಭಾಗದ ವಿಭಾಗೀಯ ವ್ಯವಸ್ಥಾಪಕರ ಕಛೇರಿ ಕಟ್ಟಡವೆಂದು ಗುರುತಿಸುತ್ತೇನೆ. ಸದ್ರಿ ಸಿ.ಡಿಯನ್ನು ಮಾನ್ಯ ವಿಚಾರಣಾಧಿಕಾರಿಯವರು ನಿಶಾನೆ ಪಿ–15 ಎಂದು ಗುರುತಿಸಿದ್ದು ಸಿ.ಡಿಯನ್ನು ನಾನು ನೋಡಿರುತ್ತೇನೆ. ಈ ವಿಚಾರದಲ್ಲಿ ನನಗೆ ತಿಳಿದಿರುವ ವಿಚಾರ ಹಾಗೂ ನೋಡಿರುವ ದಾಖಲೆಗಳ ಬಗ್ಗೆ ತಿಳಿಸಿರುತ್ತೇನೆ"

ಪಿಡಬ್ಲ್ಯು –2: ಶ್ರೀ.ಸತೀಶ್ , ಗಣಕಯಂತ್ರ ಮೇಲ್ವಿಚಾರಕರು, ಕೇಂದ್ರ ಕಛೇರಿ, ಬೆಂಗಳೂರು :

" ನಾನು 2011 ನೇ ಮೇ ತಿಂಗಳಿನಿಂದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಆರೋಪದ ಪಟ್ಟಿಯಲ್ಲಿ ನಮೂದಿಸಿರುವ ಆರೋಪದ ಎಲ್ಲಾ ದಾಖಲೆಗಳನ್ನು ಪಡೆದುಕೊಂಡು ನೋಡಿರುತ್ತೇನೆ. ಈ ಬಗ್ಗೆ ನನ್ನ ಸಾಕ್ಷಿ ವ್ಯಾಪ್ತಿಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಮಾತ್ರ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ. ಶ್ರೀ. ಎಂ. ಪಾಪೇಗೌಡ ಅಂದಿನ ಪ್ರಭಾರ ಅಧೀಕ್ಷಕರು ಕೇಂದ್ರ ಕಛೇರಿಯಲ್ಲಿ ವರದಿ ಮಾಡಿಕೊಂಡ ನಂತರ ಕಛೇರಿ ಅಧೀಕ್ಷಕರಿಗೆ ಮೀಸಲಿರಿಸಿದ ಸ್ಥಳದಲ್ಲಿ ಕೆಲಸ ನಿರ್ವಹಿಸುವ ಬದಲು ಕಛೇರಿ ವ್ಯವಸ್ಥಾಪಕರಿಗೆ ಮೀಸಲಿರಿಸಿದ ಕೊಠಡಿಯಲ್ಲಿ ಕುಳಿತು ಕಾರ್ಯ ನಿರ್ವಹಿಸುತ್ತಿರುವುದನ್ನು ಕಣ್ಣಾರೆ ಕಂಡಿರುತ್ತೇನೆ. ನಂತರ ದಿನಾಂಕ 16.10.2019 ರಂದು ಅರಣ್ಯ ಭವನದಲ್ಲಿ ನಡೆಯುತ್ತಿದ್ದ ನಿಗಮದ ಕಾರ್ಮಿಕರ ಒಪ್ಪಂದಕ್ಕೆ ನಡೆಯುವ ಸಭೆಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಭಾಗವಹಿಸಿದ್ದರು. ಆ ಸಮಯದಲ್ಲಿ ವ್ಯವಸ್ಥಾಪಕ ನಿರ್ದೇಶಕರ ನಿರ್ದೇಶನದಂತೆ ನಾನು ಕಛೇರಿ ನಿಗಮದ ಮಾಹಿತಿಗಳೊಂದಿಗೆ ಅರಣ್ಯ ಭವನಕ್ಕೆ ತೆರಳಿರುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನಿಗದಿತ ಸಭೆಯನ್ನು ಮುಗಿಸಿ 4 ನೇ ಮಹಡಿಯಿಂದ ಹೊರ ಬರುತ್ತಿರುವ ಸಂದರ್ಭದಲ್ಲಿ ಎದುರುಗಡೆ ಕಂಡ ಶ್ರೀ. ಎಂ. ಪಾಪೇಗೌಡರನ್ನು ಗಮನಿಸಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ಶ್ರೀ. ಎಂ. ಪಾಪೇಗೌಡರವರಿಗೆ ತಮಗೆ ವಹಿಸಿರುವ ಕಛೇರಿ ಕೆಲಸವನ್ನು ನಿರ್ವಹಿಸುವುದನ್ನು ಬಿಟ್ಟು ಅನ್ಯ ಕಛೇರಿಯಲ್ಲಿ ಮೇಲಾಧಿಕಾರಿಗಳ ಅನುಮತಿ ಇಲ್ಲದೆ ಯಾಕೆ ತಿರುಗಾಡುತ್ತಿದ್ದೀರೆಂದು ಪ್ರಶ್ನಿಸಿರುತ್ತಾರೆ. ಈ ಸಮಯದಲ್ಲಿ ನಾನು ಅಲ್ಲಿಯೇ ಇದ್ದುದರಿಂದ ಈ ಸನ್ನಿವೇಶವನ್ನು ನೋಡಿ ಕೇಳಿಸಿಕೊಂಡಿರುತ್ತೇನೆ. ಆರೋಪಕ್ಕೊಳಪಟ್ಟಿರುವ ಇತರ ವಿಚಾರಗಳು ಹಾಗೂ ದಾಖಲಾತಿಗಳಲ್ಲಿ ನನ್ನ ಯಾವುದೇ ಭಾಗವಹಿಸುವಿಕೆಯು ಇಲ್ಲದೇ ಇರುವುದಾಗಿ ವ್ಯಕ್ತಪಡಿಸುತ್ತೇನೆ. ಈ ಬಗ್ಗೆ ಇಷ್ಟೇ ನನ್ನ ಹೇಳಿಕೆಯಾಗಿರುತ್ತದೆ "

ಮಂಡನಾ ಪರ (1)ನೇ ಹಾಗೂ (2)ನೇ ಸಾಕ್ಷಿದಾರರುಗಳ ವಿಚಾರಣೆಯು ಮುಕಾಯ್ತವಾದ ನಂತರ ಆರೋಪಿ ಸಿಬ್ಬಂದಿಯು ಎಲ್ಲಾ ಮೂರು ವಿಚಾರಣಾ ದಿನಗಳಲ್ಲಿಯೂ ವಿಚಾರಣಾಧಿಕಾರಿಯವರಿಗೆ ಯಾವುದೇ ಮಾಹಿತಿಯನ್ನು ನೀಡದೆ ಗೈರು ಹಾಜರಾಗಿರುವುದರಿಂದಲೂ ಆರೋಪಿತ ಸಿಬ್ಬಂದಿ ಕಡೆಯಿಂದ ಮಂಡನಾಪರ ಸಾಕ್ಷಿದಾರರುಗಳ ಪಾಟಿ ಸವಾಲಿಗಾಗಲೀ, ಅವರ ಪರ ಸಾಕ್ಷಿದಾರರುಗಳನ್ನು ವಿಚಾರಣೆಗೆ ಹಾಜರುಪಡಿಸಲು ಅವರು ವಿಫಲರಾಗಿರುವುದರಿಂದಲೂ ವಿಚಾರಣೆಯನ್ನು ಏಕಪಕ್ಷೀಯವಾಗಿ ಮುಕ್ತಾಯಗೊಳಿಸಿ ಶಿಸ್ತು ಪ್ರಾಧಿಕಾರಕ್ಕೆ ವರದಿ ಸಲ್ಲಿಸಲು ತೀರ್ಮಾನಿಸಿರುವುದರಿಂದಲೂ ದಾವೆ ಮಂಡನಾಧಿಕಾರಿಯವರು ತಮ್ಮ ಲಿಖಿತ ವಾದವನ್ನು ದಿನಾಂಕ 16–01–2021ರಂದು ವಿಚಾರಣಾ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಮಂಡನಾಧಿಕಾರಿಯವರ ವರದಿಯಲ್ಲಿ ಆರೋಪಗಳ ಪರ ಲಭ್ಯವಿರುವ ದಾಖಲೆಗಳು ಹಾಗೂ ಮಂಡನಾಪರ(1) ಹಾಗೂ (2)ನೇ ಸಾಕ್ಷಿದಾರರುಗಳ ಸಾಕ್ಷಿ ಹೇಳಿಕೆಗಳ ಆಧಾರದಲ್ಲಿ ಆರೋಪಿತ ಸಿಬ್ಬಂದಿಯ

Madhu Sharma
30/01/21

ಮೇಲಿರುವ ಎಲ್ಲಾ (1) ರಿಂದ (6)ರ ತನಕದ ಆರೋಪಗಳು ಸಾಬೀತಾಗಿರುತ್ತದೆ ಎಂದು ವರದಿಸಿರುತ್ತಾರೆ. ಅವರ ವರದಿ ಪ್ರತಿಯನ್ನು ವಿಚಾರಣಾ ವರದಿಯೊಂದಿಗೆ ಸಲ್ಲಿಸಲಾಗಿದೆ.

ಆರೋಪಿತ ಸಿಬ್ಬಂದಿಯು ಎಲ್ಲಾ ವಿಚಾರಣಾ ದಿನಾಂಕಗಳಂದು ಗೈರುಹಾಜರಾಗಿರುವುದರಿಂದಲೂ, ವಿಚಾರಣೆಯನ್ನು ಏಕಪಕ್ಷೀಯವಾಗಿ (Exparte) ವಿಚಾರಣೆಗೊಳಪಡಿಸಿ ಮುಕ್ತಾಯಗೊಳಿಸಲು ತೀರ್ಮಾನಿಸಿರುವುದರಿಂದಲೂ, ಮಂಡನಾಧಿಕಾರಿಯವರ ವಾದವನ್ನು ಆರೋಪಿತ ಸಿಬ್ಬಂದಿಯವರಿಗೆ ಅವರ ವರದಿಗಾಗಿ ಒದಗಿಸುವ ಅಗತ್ಯವೂ ಕಂಡು ಬರುವುದಿಲ್ಲ. ದಾವೆ ಮಂಡನಾಧಿಕಾರಿಯವರ ಲಿಖಿತ ವಾದ ಹಾಗೂ ಮಂಡನಾ ಪರ (1)ನೇ ಹಾಗೂ (2)ನೇ ಸಾಕ್ಷಿದಾರರುಗಳ ಸಾಕ್ಷಿ ಹೇಳಿಕೆಗಳು ಹಾಗೂ ಈ ಸಂಬಂಧ ಗುರುತಿಸಲಾಗಿರುವ (1) ರಿಂದ (15)ರ ದಾಖಲೆಗಳು ಇವುಗಳನ್ನು ಕುಲಂಕುಷವಾಗಿ ಪರಿಶೀಲಿಸಿ ಆರೋಪಿತ ಸಿಬ್ಬಂದಿ ಶ್ರೀ.ಪಾಪೇಗೌಡರ ಮೇಲಿರುವ ಆರೋಪಗಳ ಬಗ್ಗೆ ಈ ಕೆಳಗಿನಂತೆ ಅಭಿಪ್ರಾಯಕ್ಕೆ ಬರಲಾಗಿದೆ.

ವಿಚಾರಣಾಧಿಕಾರಿಯವರ ಅಭಿಪ್ರಾಯಗಳು:

**ಆರೋಪ –1 :**

ಶ್ರೀ. ಎಂ. ಪಾಪೇಗೌಡ, ಇವರು ಕೇಂದ್ರ ಕಛೇರಿಯಲ್ಲಿ ಪ್ರಭಾರ ಅಧೀಕ್ಷಕರಾಗಿ ದಿನಾಂಕ 04.06.2019 ರಂದು ಕಾರ್ಯವರದಿ ಮಾಡಿಕೊಂಡ ನಂತರ ಕೇಂದ್ರ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ಕಅಅನಿನಿ/ಎ1/ಸಿಬ್ಬಂದಿ/2019–20/379 ದಿನಾಂಕ 12.06.2019 ರಲ್ಲಿ ರಜೆ, ವೇತನ ಬಡ್ತಿ, ಪ್ರಯಾಣ ಭತ್ಯೆ ಇತ್ಯಾದಿ ಕೆಲಸ ಕಾರ್ಯಗಳ ಹಂಚಿಕೆಯನ್ನು ಮಾಡಲಾಗಿರುತ್ತದೆ. ಅವರಿಗೆ ವಹಿಸಿರುವ ಖಾತೆಯ ಪ್ರಭಾರವನ್ನು ವಹಿಸಿಕೊಂಡ ನಂತರ ಖಾಲಿಯಿರುವ ಅಧೀಕ್ಷಕರ ಸ್ಥಳದಲ್ಲಿ ಕುಳಿತು ಕೆಲಸ ನಿರ್ವಹಿಸುವ ಬದಲು, ಕಛೇರಿ ವ್ಯವಸ್ಥಾಪಕರಿಗೆ ಮೀಸಲಿಸಿರುವ ಕೊಠಡಿಯಲ್ಲಿ ಮೇಲಾಧಿಕಾರಿಯವರ ಅನುಮತಿಯನ್ನು ಪಡೆಯದೆ ಕುಳಿತು ಕೆಲಸ ನಿರ್ವಹಿಸಿರುವ ಆರೋಪವು ಸಾಬೀತಾಗುತ್ತದೆಯೇ ? – "ಹೌದು.

**ಕಾರಣಗಳು : –**

ಅಭಿಯೋಜನಾ ಪರ ಒಂದನೇ ಸಾಕ್ಷಿದಾರರಾದ ಶ್ರೀ.ಬಿ.ಶಿವರಾಜುರವರು ದಿನಾಂಕ 4-1-2021ರಂದು ವಿಚಾರಣಾಧಿಕಾರಿಯವರ ಮುಂದೆ ನೀಡಿರುವ ಹೇಳಿಕೆಯಲ್ಲಿ ದಿನಾಂಕ 12.06.2019 ರಂದು ಆರೋಪಿತ ಸಿಬ್ಬಂದಿ ಶ್ರೀ. ಎಂ. ಪಾಪೇಗೌಡರು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ಕಾರ್ಯ ಹಂಚಿಕೆ ಮಾಡಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಆದೇಶ ಮಾಡಿದ್ದು, ಅದರಂತೆ ಅವರು ಕಛೇರಿ ಅಧೀಕ್ಷಕರಿಗೆ ಮೀಸಲಿರಿಸಿದ ಆಸನದಲ್ಲಿ ಕುಳಿತು ಕರ್ತವ್ಯ ನಿರ್ವಹಿಸಬೇಕಾಗಿತ್ತು. ಆದರೆ ಆರೋಪಿತರು ಕಛೇರಿ ಅಧೀಕ್ಷಕರಿಗೆ ಮೀಸಲಿರಿಸಿದ ಆಸನದ ಬದಲು ಕಛೇರಿ ವ್ಯವಸ್ಥಾಪಕರಿಗೆ ಮೀಸಲಿರಿಸಿದ ಆಸನದಲ್ಲಿ ಕುಳಿತು ಕಾರ್ಯನಿರ್ವಹಿಸಿರುತ್ತಾರೆಂದು ತಿಳಿಸಿರುತ್ತಾರೆ. ಮಂಡನಾ ಪರ (2)ನೇ ನೇ ಸಾಕ್ಷಿದಾರರಾದ ಶ್ರೀ.ಪಿ.ಸತೀಶ್, ಗಣಕಯಂತ್ರ ಮೇಲ್ವಿಚಾರಕರು, ದಿನಾಂಕ 4.1.2021ರಂದು ನೀಡಿರುವ ಹೇಳಿಕೆಯಲ್ಲಿ ಶ್ರೀ. ಎಂ. ಪಾಪೇಗೌಡ ಅಂದಿನ ಪ್ರಭಾರ ಅಧೀಕ್ಷಕರು ಕೇಂದ್ರ ಕಛೇರಿಯಲ್ಲಿ ವರದಿ ಮಾಡಿಕೊಂಡ ನಂತರ ಕಛೇರಿ ಅಧೀಕ್ಷಕರಿಗೆ ಮೀಸಲಿರಿಸಿದ ಸ್ಥಳದಲ್ಲಿ ಕೆಲಸ ನಿರ್ವಹಿಸುವ ಬದಲು ಕಛೇರಿ ವ್ಯವಸ್ಥಾಪಕರಿಗೆ ಮೀಸಲಿರಿಸಿದ ಕೊಠಡಿಯಲ್ಲಿ ಕುಳಿತು ಕಾರ್ಯ ನಿರ್ವಹಿಸುತ್ತಿರುವುದನ್ನು ಕಣ್ಣಾರೆ ಕಂಡಿರುತ್ತೇನೆಂದು ತಿಳಿಸಿರುತ್ತಾರೆ. ನಿಶಾನೆ–ಪಿ1 ಹಾಗೂ ನಿಶಾನೆ–ಪಿ2 ದಾಖಲೆಗಳು ಅವರಿಗೆ ಕಾರ್ಯಹಂಚಿಕೆ ಮಾಡಿರುವ ಆದೇಶ ಹಾಗೂ ಆರೋಪದ ಅವರ ವಿವರಣೆಯನ್ನು ಕೇಳುವ ದಾಖಲೆಗಳಾಗಿರುತ್ತದೆ. ನಿಶಾನೆ–ಪಿ3 ಆರೋಪಿತ ಸಿಬ್ಬಂದಿಯು ಕಛೇರಿ ವ್ಯವಸ್ಥಾಪಕರಿಗೆ ಮೀಸಲಿರಿಸಿದ ಆಸದಲ್ಲಿ ಕುಳಿತು ಕೆಲಸ ನಿರ್ವಹಿಸಿರುವುದನ್ನು ತಾನಾಗಿಯೇ ಒಪ್ಪಿಕೊಂಡು ನೀಡಿದ ಲಿಖಿತ ಹೇಳಿಕೆಯಾಗಿರುತ್ತದೆ. ಮಂಡನಾ ಪರ (1)ನೇ ಹಾಗೂ (2)ನೇ ಸಾಕ್ಷಿದಾರರುಗಳ ಹೇಳಿಕೆ ಹಾಗೂ ನಿಶಾನೆ –ಪಿ1, ಪಿ2 ಹಾಗೂ ಪಿ3 ದಾಖಲೆಗಳಿಂದ ಆರೋಪಿತ ಸಿಬ್ಬಂದಿಯು ಮೇಲಾಧಿಕಾರಿಯವರ ಪೂರ್ವಾನುಮತಿ ಇಲ್ಲದೇ ಕಛೇರಿ ಅಧೀಕ್ಷರಿಗೆ ಮೀಸಲಿರಿಸಿದ ಆಸನದ ಬದಲು ಕಛೇರಿ ವ್ಯವಸ್ಥಾಪಕರಿಗೆ ಮೀಸಲಿರಿಸಿದ ಆಸನದಲ್ಲಿ ಕುಳಿತು ಕೆಲಸ ಮಾಡುವ ಮೂಲಕ

Madhu Sharma
30/01/21

18

ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966 ರ ನಿಯಮ 3(1)(iii)ನ್ನು ಹಾಗೂ ನಿಗಮದ ಸೇವಾ ನಿಯಮಾವಳಿಯ ನಿಯಮ ಸಂಖ್ಯೆ 25. ಉಲ್ಲಂಘಿಸಿರುವ ಆರೋಪವು ಸಾಬೀತಾಗುತ್ತದೆ.

ಆರೋಪ : 2:

ಆರೋಪಿತ ಸಿಬ್ಬಂದಿಯು ದಿನಾಂಕ: 16-10-2019 ರಂದು ಕಛೇರಿ ವೇಳೆಯಲ್ಲಿ ಅವರಿಗೆ ವಹಿಸಿರುವ ಖಾತೆಯ ಕೆಲಸಗಳನ್ನು ನಿರ್ವಹಿಸುವುದನ್ನು ಬಿಟ್ಟು ಮೇಲಾಧಿಕಾರಿಯವರ ಪೂರ್ವಾನುಮತಿ ಇಲ್ಲದೇ ಮತ್ತು ಕಛೇರಿಯ ಚಲನವಲನ ವಹಿಯಲ್ಲಿಯೂ ದಾಖಲಿಸದೇ ಕಛೇರಿ ವೇಳೆಯಲ್ಲಿ ವಿವಿದ ಕಛೇರಿಗಳಲ್ಲಿ ಸುತ್ತಾಡಿರುವುದು ಮತ್ತು ದಿನಾಂಕ: 13-02-2020 ರಂದು ಮೇಲಾಧಿಕಾರಿಯವರ ಅನುಮತಿ ಇಲ್ಲದೆ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗುವ ಮೂಲಕ ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳ 1966 ರ ನಿಯಮ 3(1) (ii)(iii) ನ್ನು ಹಾಗೂ ನಿಗಮದ ಸೇವಾ ನಿಯಮಾವಳಿಯ ನಿಯಮ ಸಂಖ್ಯೆ 24, 25 ಹಾಗು 27ನ್ನು ಉಲ್ಲಂಘಿಸಿರುವ ಆರೋಪವೂ ಸಾಭೀತಾಗುತ್ತದೆಯೇ ? – "ಹೌದು".

ಕಾರಣಗಳು :-

ಮಂಡನಾ ಪರ (1)ನೇ ಸಾಕ್ಷಿದಾರರಾದ ಶ್ರೀ.ಬಿ.ಶಿವರಾಜುರವರು ದಿನಾಂಕ: 4-1-2021ರಂದು ವಿಚಾರಣಾಧಿಕಾರಿಯವರ ಮುಂದೆ ನೀಡಿರುವ ಹೇಳಿಕೆಯಲ್ಲಿ ದಿನಾಂಕ 13.02.2020 ರಂದು ಆರೋಪಿತ ಸಿಬ್ಬಂದಿಯು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕಛೇರಿ ವ್ಯವಸ್ಥಾಪಕರ ಪೂರ್ವಾನುಮತಿ ಇಲ್ಲದೆ ಕಛೇರಿಯಿಂದ ಹೊರತೆರಳಿರುವುದಾಗಿ ಕಂಡುಬಂದಿರುವುದರಿಂದ ದಿನಾಂಕ 18.02.2020 ರಂದು ಶ್ರೀ. ಎಂ. ಪಾಪೇಗೌಡರಿಗೆ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯಿಂದ ಜ್ಞಾಪನಾ ಪತ್ರವೊಂದನ್ನು ನೀಡಿ ಅವರು ಕಛೇರಿಯಿಂದ ಗೈರುಹಾಜರಾದ ಅವಧಿಯನ್ನು ಅನಧಿಕೃತ ಗೈರುಹಾಜರಿಯೆಂದು ಏಕೆ ಪರಿಗಣಿಸಬಾರದೆಂದು ತಿಳಿಸಲಾಗಿರುತ್ತದೆ. ಸದ್ರಿ ಮೆಮೋಗೆ ದಿನಾಂಕ: 19-2-2020 ರಂದು ಉತ್ತರಿಸಿರುವ ಅವರು ಹೊರಗೆ ತೆರಳುವಾಗ ಕಛೇರಿ ವ್ಯವಸ್ಥಾಪಕರ ಅನುಮತಿಯನ್ನು ಪಡೆದಿರುತ್ತೇನೆಂದು ತಿಳಿಸಿದ್ದರೂ ಇದನ್ನು ಕಛೇರಿ ವ್ಯವಸ್ಥಾಪಕರು ತಮ್ಮ ಹೇಳಿಕೆಯಲ್ಲಿ ನಿರಾಕರಿಸಿರುತ್ತಾರೆ. ದಿನಾಂಕ 13.02.2020 ರಂದು ಬೆಳಿಗ್ಗೆ ಅವರು ಕಛೇರಿಗೆ ಹಾಜರಾಗಿ ಕಛೇರಿ ಹಾಜರಾತಿ ವಹಿಯಲ್ಲಿ ಸಹಿ ಮಾಡಿರುತ್ತಾರೆ. ತದನಂತರ ಅವರು ಕಛೇರಿ ಬಿಟ್ಟು ಹೊರ ತೆರಳಿರುತ್ತಾರೆಂದು ಸಾಕ್ಷಿ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ನಿಗಮದ ಪರ 2ನೇ ಸಾಕ್ಷಿದಾರರಾದ ಶ್ರೀ.ಪಿ.ಸತೀಶ್., ಗಣಕಯಂತ್ರ ಮೇಲ್ವಿಚಾರಕರು ದಿನಾಂಕ: 04-01-2021 ರಂದು ವಿಚಾರಣಾಧಿಕಾರಿಯವರ ಮುಂದೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ದಿನಾಂಕ 16.10.2019 ರಂದು ಅರಣ್ಯ ಭವನದಲ್ಲಿ ನಡೆಯುತ್ತಿದ್ದ ನಿಗಮದ ಕಾರ್ಮಿಕರ ಒಪ್ಪಂದಕ್ಕೆ ಸಂಬಂಧಿಸಿದಂತೆ ನಡೆಯುವ ಸಭೆಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಭಾಗವಹಿಸಿದ್ದರು. ಆ ಸಮಯದಲ್ಲಿ ವ್ಯವಸ್ಥಾಪಕ ನಿರ್ದೇಶಕರ ನಿರ್ದೇಶನದಂತೆ ನಾನು ಕಛೇರಿಯಿಂದ ನಿಗಮದ ಕೆಲವು ಮಾಹಿತಿಗಳೊಂದಿಗೆ ಅರಣ್ಯ ಭವನಕ್ಕೆ ತೆರಳಿರುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನಿಗದಿತ ಸಭೆಯನ್ನು ಮುಗಿಸಿ 4 ನೇ ಮಹಡಿಯಿಂದ ಹೊರ ಬರುತ್ತಿರುವ ಸಂದರ್ಭದಲ್ಲಿ ಎದುರುಗಡೆ ಕಂಡ ಶ್ರೀ. ಎಂ. ಪಾಪೇಗೌಡರನ್ನು ಗಮನಿಸಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು, ಶ್ರೀ. ಎಂ. ಪಾಪೇಗೌಡರವರಿಗೆ ತಮಗೆ ವಹಿಸಿರುವ ಕಛೇರಿ ಕೆಲಸವನ್ನು ನಿರ್ವಹಿಸುವುದನ್ನು ಬಿಟ್ಟು ಅನ್ಯ ಕಛೇರಿಯಲ್ಲಿ ಮೇಲಾಧಿಕಾರಿಗಳ ಅನುಮತಿ ಇಲ್ಲದೆ ಯಾಕೆ ತಿರುಗಾಡುತ್ತಿದ್ದೀರೆಂದು ಪ್ರಶ್ನಿಸುತ್ತಾರೆ. ಈ ಸಮಯದಲ್ಲಿ ನಾನು ಅಲ್ಲಿಯೇ ಇದ್ದುದರಿಂದ ಈ ಸನ್ನಿವೇಶವನ್ನು ನೋಡಿ ಕೇಳಿಸಿಕೊಂಡಿರುತ್ತೇನೆಂದು ತಿಳಿಸಿರುತ್ತಾರೆ. ನಿಶಾನೆ -ಪಿ5 ದಾಖಲೆಯು ಅವರು ದಿನಾಂಕ: 13-02-2020ರಂದು ಕಛೇರಿಯಿಂದ ಅನಧಿಕೃತ ಗೈರು ಹಾಜರಾದ ಬಗ್ಗೆ ಸದ್ರಿ ದಿನವನ್ನು ವೇತನರಹಿತ ರಜೆಯೆಂದು ಪರಿಗಣಿಸಿ ಆದೇಶಿಸಿರುವ ದಾಖಲೆಯಾಗಿರುತ್ತದೆ. ನಿಶಾನೆ ಪಿನ್ನು ಆರೋಪಿತ ಸಿಬ್ಬಂದಿಯು ಕಛೇರಿಯಲ್ಲಿ ಸ್ವೀಕರಿಸಿದ್ದರೂ ಅದರ ಬಗ್ಗೆ ಅವರು ಎಲ್ಲಿಯೂ ಆಕ್ಷೇಪಿಸುವುದಾಗಿ ದಾಖಲೆಗಳಿಂದ ಕಂಡುಬರುವುದಿಲ್ಲ. ನಿಗಮದ ಪರ (1) ಹಾಗೂ (2)ನೇ ಸಾಕ್ಷಿದಾರರುಗಳ ಸಾಕ್ಷಿ ಹೇಳಿಕೆಗಳು ಹಾಗೂ ನಿಶಾನೆ -ಪಿ4. ಹಾಗೂ ಪಿ-5ನೇ ದಾಖಲೆಗಳು ಆರೋಪಿತ ಸಿಬ್ಬಂದಿಯು ಮೇಲಾಧಿಕಾರಿಯವರ ಪೂರ್ವಾನುಮತಿ ಇಲ್ಲದೇ ಹಾಗೂ ಕಛೇರಿಯ ಚಲನವಲನ ವಹಿಯಲ್ಲಿ ದಾಖಲಿಸದೇ ಕಛೇರಿ ವೇಳೆಯಲ್ಲಿ ಅವರಿಗೆ ನೀಡಿರುವ ಕರ್ತವ್ಯವನ್ನು ನಿರ್ವಹಿಸುವುದು ಬಿಟ್ಟು ವಿವಿದ ಕಛೇರಿಗಳಲ್ಲಿ ಸುತ್ತಾಡುವ ಮೂಲಕ ಕರ್ನಾಟಕ ನಾಗರೀಕ



Madhu Sharma
30/01/21

17

ಸೇವಾ (ವರ್ತನೆ) ನಿಯಮಗಳು 1966 ರ ನಿಯಮ 3(1) (ii)(iii) ನ್ನು ಹಾಗೂ ನಿಗಮದ ಸೇವಾ ನಿಯಮಾವಳಿಯ ನಿಯಮ ಸಂಖ್ಯೆ: 24,25, ಹಾಗು 27ನ್ನು ಉಲ್ಲಂಘಿಸಿರುವ ಆರೋಪವು ಸಾಭೀತಾಗುತ್ತದೆ.

ಆರೋಪ –3.

ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ಸುಬಾಬುಲ್ ಮತ್ತು ಕ್ಯಾಸುರಿನಾ ನೆಡುತೋಪುಗಳನ್ನು ಬೆಳೆಸುವ ನಿಗಮದ ಯೋಜನೆಯ ವಿರುದ್ಧ ಅವರ ಕಾರ್ಯವ್ಯಾಪ್ತಿ ಮೀರಿ ದಿನಾಂಕ 24.01.2020 ರಂದು ಸರ್ಕಾರಕ್ಕೆ ನೇರವಾಗಿ ಪತ್ರ ಬರೆದು ನಿಗಮವು ವಿವಿಧ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಕ್ರಮಗಳನ್ನು ಆಕ್ಷೇಪಿಸಿ ಸದ್ರಿ ಯೋಜನೆಯನ್ನು ಮರುಪರಿಶೀಲಿಸುವಂತೆ ಒತ್ತಾಯಿಸಿ ಸರಕಾರದ ಮುಖ್ಯ ಕಾರ್ಯದರ್ಶಿ, ಅರಣ್ಯ ಮತ್ತು ಪರಿಸರ ಇಲಾಖೆ, ಕಾರ್ನಾಟಕ ಸರಕಾರ , ~~ಬೆಂಗಳೂರು ನೇರವಾಗಿ~~ ಪತ್ರ ಬರೆಯುವ ಮೂಲಕ ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966 ಹಾಗೂ ನಿಗಮದ ಸೇವಾ ನಿಯಮಾವಳಿಯ ನಿಯಮಗಳನ್ನು ಉಲ್ಲಂಘಿಸಿರುತ್ತಾರೆಯೇ ?. ಹೌದು.

ಕಾರಣಗಳು :

ನಿಗಮದ ಪರ (1)ನೇ ಸಾಕ್ಷಿದಾರರಾದ ಶ್ರೀ.ಬಿ.ಶಿವರಾಜು, ಕಛೇರಿ ವ್ಯವಸ್ಥಾಪಕರು, ಕೇಂದ್ರ ಕಛೇರಿ ಬೆಂಗಳೂರು ಇವರು ದಿನಾಂಕ: 04.01.2021 ರಂದು ವಿಚಾರಣಾ ಪ್ರಾಧಿಕಾರದ ಮುಂದೆ ನೀಡಿರುವ ಹೇಳಿಕೆಯಲ್ಲಿ ನಿಗಮವು ಸುಬಾಬುಲ್ ಮತ್ತು ಕ್ಯಾಸುರಿನಾ ನೆಡುತೋಪುಗಳನ್ನು ಬೆಳೆಸುವ ನಿಗಮದ ಯೋಜನೆಯ ವಿರುದ್ಧ ಸರಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅಪಜೀ, ಬೆಂಗಳೂರು ಹಾಗೂ ನಿಗಮದ ಅಧ್ಯಕ್ಷರಿಗೆ ಶ್ರೀ. ಎಂ. ಪಾಪೇಗೌಡ ಇವರು, ದಿನಾಂಕ 24.01.2020 ರಂದು ದೂರರ್ಜಿಯನ್ನು ಬರೆದಿದ್ದು ಸದ್ರಿ ದೂರರ್ಜಿಯು ದಿನಾಂಕ 28.01.2020 ರಂದು ವ್ಯವಸ್ಥಾಪಕ ನಿರ್ದೇಶಕರ ಕಛೇರಿಯಲ್ಲಿ ಸ್ವೀಕೃತವಾಗಿದ್ದು ಅದು ಸ್ವೀಕೃತಿ ವಹಿಯ ಕ್ರಮ ಸಂಖ್ಯೆ 4759 ರಲ್ಲಿ ದಾಖಲಾಗಿರುತ್ತದೆ ಎಂದು ತಿಳಿಸಿ ಸದ್ರಿ ದೂರರ್ಜಿ ನಿಶಾನೆ–ಪಿ6 ನ್ನು ಪರಿಶೀಲಿಸಿ ಅದರಲ್ಲಿರುವ ಸಹಿಯು ಆರೋಪಿತ ಸಿಬ್ಬಂದಿ ಶ್ರೀ. ಎಂ. ಪಾಪೇಗೌಡರದ್ದೇ ಆಗಿರುತ್ತದೆ ಎಂದು ಗುರುತಿಸಿಕೊಂಡಿರುತ್ತಾರೆ. ನಿಗಮದ ಯೋಜನೆಯ ವಿರುದ್ಧ ಅವರ ಕಾರ್ಯವ್ಯಾಪ್ತಿ ಮೀರಿ ದಿನಾಂಕ 24.01.2020 ರಂದು ಸರ್ಕಾರಕ್ಕೆ ನೇರವಾಗಿ ಪತ್ರ ಬರೆದು ನಿಗಮವು ವಿವಿಧ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಕ್ರಮಗಳನ್ನು ಆಕ್ಷೇಪಿಸಿ ಸದ್ರಿ ಯೋಜನೆಯನ್ನು ಮರುಪರಿಶೀಲಿಸುವಂತೆ ಒತ್ತಾಯಿಸಿ ಸರಕಾರದ ಮುಖ್ಯ ಕಾರ್ಯದರ್ಶಿ, ಅರಣ್ಯ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರಕಾರ , ಬೆಂಗಳೂರು ಇವರಿಗೆ ನೇರವಾಗಿ ಬರೆದಿರುವ ನಿಶಾನೆ–ಪಿ6 ಪತ್ರವು ಈ ಆರೋಪವನ್ನು ಸಮರ್ಥಿಸುವ ಮುಖ್ಯ ದಾಖಲೆಯಾಗಿದ್ದು, ಈ ಆರೋಪವನ್ನು ಸಮರ್ಥಿಸಲು ಇದಕ್ಕಿಂತ ಹೆಚ್ಚಿನ ಸಾಕ್ಷ್ಯಾಧಾರಗಳು ಅಗತ್ಯವೆಂದು ಕಂಡು ಬರುವುದಿಲ್ಲ. ನಿಗಮದ ಪರ (1)ನೇ ಸಾಕ್ಷಿದಾರರ ಹೇಳಿಕೆ ಹಾಗೂ ನಿಶಾನೆ–ಪಿ6 ದಾಖಲೆಯು ನಿಗಮವು ವಿವಿಧ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಕ್ರಮಗಳನ್ನು ಆಕ್ಷೇಪಿಸಿ ಸದ್ರಿ ಯೋಜನೆಯನ್ನು ಮರುಪರಿಶೀಲಿಸುವಂತೆ ಒತ್ತಾಯಿಸಿ ಸರಕಾರದ ಮುಖ್ಯ ಕಾರ್ಯದರ್ಶಿ, ಅರಣ್ಯ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರಕಾರ , ಬೆಂಗಳೂರು ಇವರಿಗೆ ಮೇಲಾಧಿಕಾರಿಯವರ ಪೂರ್ವಾನುಮತಿ ಇಲ್ಲದೇ ನೇರವಾಗಿ ಪತ್ರ ಬರೆಯುವ ಮೂಲಕ ಆರೋಪಿತ ಸಿಬ್ಬಂದಿಯು ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966 ರ ನಿಯಮ 3(1) (ii)(iii) ನ್ನು ಹಾಗೂ ನಿಗಮದ ಸೇವಾ ನಿಯಮಾವಳಿಯ ನಿಯಮ ಸಂಖ್ಯೆ: 24, 25, 26 ಹಾಗು 27ನ್ನು ಉಲ್ಲಂಘಿಸಿರುವ ಆರೋಪವು ಸಾಭೀತಾಗುತ್ತದೆ.

ಆರೋಪ–4 :

ಸಕಲೇಶಪುರ ತಾಲ್ಲೂಕು ಬ್ಯಾಗಡಿಹಳ್ಳಿ ಗ್ರಾಮದ ಸರ್ವೆ ನಂಬ್ರ 32 ರ 52 ಎಕರೆ ಅರಣ್ಯ ಪ್ರದೇಶವನ್ನು ನಿಗಮವು ಅನಧಿಕೃತವಾಗಿ ಭೂ ಮಾಫಿಯದವರಿಗೆ ಪರಬಾರೆ ಮಾಡಿರುತ್ತಾರೆಂದು ಕೇಂದ್ರೀಯ ಅಧಿಕಾರಯುಕ್ತ ಸಮಿತಿ, ನವದೆಹಲಿಗೆ ದಿನಾಂಕ 16.01.2019 ಮತ್ತು 11.02.2020 ರಂದು ಸುಳ್ಳು ದೂರರ್ಜಿಗಳನ್ನು ಸಲ್ಲಿಸಿರುವುದಲ್ಲದೆ ಇದೇ ವಿಚಾರಲ್ಲಿ ಸಿ.ಬಿ.ಐ ತನಿಖೆ ನಡೆಸಲು ಆದೇಶಿಸುವಂತೆ ಕೋರಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 9616/2019 (ಪಿ.ಐ.ಎಲ್.)ನ್ನು ದಿನಾಂಕ 09.09.2019 ರಂದು ರಿಟ್ ದಾವೆಯೊಂದನ್ನು ಅವರ ಹೆಸರಿನಲ್ಲಿಯೇ ದಾಖಲಿಸಿರುವುದು. ವ್ಯವಸ್ಥಾಪಕ

Madhu Sharma
30/01/21

ನಿರ್ದೇಶಕರವರು ಭೂ ಮಾಫಿಯದಾರರಿಗೆ ಅಕ್ರಮವಾಗಿ ಭೂಮಿ ಹಂಚಿಕೆ ಮಾಡಿರುವುದಾಗಿ ಲೋಕಾಯುಕ್ತ ತನಿಖೆ ನಡೆಸುವಂತೆ ಕೋರಿ ದಿನಾಂಕ 19.09.2019 ರಂದು ದೂರರ್ಜಿ ಸಂಖ್ಯೆ- 2586/2019 ರಂತೆ ಮಾನ್ಯ ಕರ್ನಾಟಕ ಲೋಕಾಯುಕ್ತರಲ್ಲಿ ದೂರರ್ಜಿ ದಾಖಲಿಸುವ ಮೂಲಕ ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966 ರ ನಿಯಮ 3(1) iii ನ್ನು ನಿಗಮದ ಸೇವಾ ನಿಯಮಾವಳಿಯ ನಿಯಮ ಸಂಖ್ಯೆ: 25, 26 ಮತ್ತು 27 ನ್ನು ಉಲ್ಲಂಘನೆ ಮಾಡಿರುತ್ತಾರೆಯೇ ? – "ಹೌದು"

ಕಾರಣಗಳು :-

ನಿಗಮದ ಪರ (1)ನೇ ಸಾಕ್ಷಿದಾರರಾದ ಶ್ರೀ.ಬಿ.ಶಿವರಾಜು, ಕಛೇರಿ ವ್ಯವಸ್ಥಾಪಕರು, ಕೇಂದ್ರ ಕಛೇರಿ ಬೆಂಗಳೂರು ಇವರು ದಿನಾಂಕ: 04.01.2021 ರಂದು ವಿಚಾರಣಾ ಪ್ರಾಧಿಕಾರದ ಮುಂದೆ ನೀಡಿರುವ ಹೇಳಿಕೆಯಲ್ಲಿ ಆರೋಪಿತ ಸಿಬ್ಬಂದಿ ಶ್ರೀ. ಎಂ. ಪಾಪೇಗೌಡರು ದಿನಾಂಕ 16.01.2019 ರಂದು ಹಾಗೂ 11.02.2020 ರಂದು ಕೇಂದ್ರೀಯ ಅಧಿಕಾರಯುಕ್ತ ಸಮಿತಿ, ನವದೆಹಲಿಗೆ ಅರ್ಜಿ ಸಲ್ಲಿಸಿ ಚಿಕ್ಕಮಗಳೂರು ವಿಭಾಗದ ಬ್ಯಾಗಡಿಹಳ್ಳಿ ಗ್ರಾಮದ ಸರ್ವೆ ನಂಬ್ರ 32 ರ 52 ಎಕರೆ ಅರಣ್ಯ ಪ್ರದೇಶವನ್ನು ನಿಗಮದ ಅಧಿಕಾರಿಗಳು ಅಕ್ರಮವಾಗಿ ಭೂ ಮಾಫಿಯದಾರರಿಗೆ ಪರಭಾರೆ ಮಾಡಿದೆ ಎಂದು ನಿಗಮದ ಮೇಲಾಧಿಕಾರಿಗಳ ವಿರುದ್ಧ ಬರೆದಿರುವ ನಿಶಾನೆ-ಪಿ7 ಮತ್ತು ನಿಶಾನೆ-ಪಿ8 ನ್ನು ಪರಿಶೀಲಿಸಿ ಅದರಲ್ಲಿರುವ ಸಹಿಯು ಶ್ರೀ.ಪಾಪೇಗೌಡರದ್ದೆಂದು ಗುರುತಿಸಿಕೊಂಡಿರುತ್ತಾರೆ. ಅಲ್ಲದೆ ಇದೇ ವಿಚಾರದಲ್ಲಿ ತನಿಖೆ ಮತ್ತು ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳುವಂತೆ ಕೋರಿ ಕರ್ನಾಟಕ ಸರಕಾರದ ಮಾನ್ಯ ಲೋಕಾಯುಕ್ತರಿಗೆ ದಿನಾಂಕ 19.09.2019 ರಂದು ಸಲ್ಲಿಸಿರುವ ದಾಖಲೆ ಪ್ರತಿಗಳು ನಿಶಾನೆ ಪಿ-10ನ್ನು ಮಂಡನಾಪರ ಸಾಕ್ಷಿ ಪಿಡಬ್ಲ್ಯು-(1) ಇವರು ಪರಿಶೀಲಿಸಿದ್ದು ಅದರಲ್ಲಿರುವ ಸಹಿಯು ಆರೋಪಿತ ಸಿಬ್ಬಂದಿ ಶ್ರೀ.ಪಾಪೇಗೌಡರದ್ದೆಂದು ಗುರುತಿಸಿಕೊಂಡಿರುತ್ತಾರೆ. ಅಲ್ಲದೆ ಇದೇ ವಿಚಾರದಲ್ಲಿ ದಿನಾಂಕ 09.08.2019 ರಂದು ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಮತ್ತು ಪರಿಸರ ಇಲಾಖೆ ಬೆಂಗಳೂರು ಇವರಿಗೆ ಆರೋಪಿತ ಸಿಬ್ಬಂದಿಯು ದೂರರ್ಜಿಯೊಂದನ್ನು ಸಲ್ಲಿಸಿ, ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಬ್ಯಾಗಡಿಹಳ್ಳಿ ಸರ್ವೆ ನಂಬ್ರ 32 ರಲ್ಲಿ 52 ಎಕರೆ ಭೂಮಿಯನ್ನು ಅಕ್ರಮವಾಗಿ ಭೂ ಮಾಫಿಯದವರಿಗೆ ಪರಭಾರೆ ಮಾಡುತ್ತಿರುವ ಬಗ್ಗೆ ಅರಣ್ಯ ಇಲಾಖೆ ಮತ್ತು ನಿಗಮದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ನಿಶಾನೆ- ಪಿ11 ರಂತೆ ಸಲ್ಲಿಸಿರುವ ದೂರರ್ಜಿಯನ್ನು ಪಿಡಬ್ಲ್ಯು-1 ಪರಿಶೀಲಿಸಿದ್ದು ಅದರಲ್ಲಿರುವ ಸಹಿಯು ಶ್ರೀ.ಪಾಪೇಗೌಡರದ್ದೆಂದು ಗುರುತಿಕೊಂಡಿರುತ್ತಾರೆ. ಅಲ್ಲದೆ ಈ ಭೂ ಅತಿಕ್ರಮಣದ ಬಗ್ಗೆ ಸಿ.ಬಿ.ಐ ತನಿಖೆ ನಡೆಸುವಂತೆ ಕೋರಿ ಡಬ್ಲ್ಯುಪಿ ನಂ 9616/2019 ರಂತೆ ಕರ್ನಾಟಕ ರಾಜ್ಯದ ಮಾನ್ಯ ಉಚ್ಛ ನ್ಯಾಯಾಲಯಕ್ಕೆ ರಿಟ್ ದಾವೆಯೊಂದನ್ನು (ಪಿಐಎಲ್) ಆರೋಪಿತ ಸಿಬ್ಬಂದಿಯು ದಾಖಲಿಸಿರುವ ನಿಶಾನೆ-ಪಿ9 ಹಾಗೂ 9(ಎ) ದಾಖಲೆಯನ್ನು ಪಿಡಬ್ಲ್ಯು-1 ಪರಿಶೀಲಿಸಿ ಗುರುತಿಸಿಕೊಂಡಿರುತ್ತಾರೆ. ನಿಶಾನೆ ಪಿ-7, ನಿಶಾನೆ ಪಿ-8, ನಿಶಾನೆ ಪಿ-9, 9(ಎ), ನಿಶಾನೆ ಪಿ10 ಹಾಗೂ ನಿಶಾನೆ-ಪಿ11 ಈ ಎಲ್ಲಾ ದಾಖಲೆಗಳೂ ಆರೋಪಿತ ಸಿಬ್ಬಂದಿಯು ಸ್ವತಃ ನಿಗಮ ಮತ್ತು ನಿಗಮದ ಅಧಿಕಾರಿಗಳ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿರುವುದನ್ನು ಸಮರ್ಥಿಸುವ, ಅವರೇ ಸಹಿಮಾಡಿರುವ ದಾಖಲೆಗಳಾಗಿದ್ದು, ಈ ಆರೋಪಗಳನ್ನು ಸಾಬೀತುಪಡಿಸಲು ಇದಕ್ಕಿಂತ ಹೆಚ್ಚಿನ ಸಾಕ್ಷ್ಯಾಧಾರಗಳು ಹಾಗೂ ದಾಖಲೆಗಳು ಅಗತ್ಯವೆಂದು ನನಗೆ ಅನಿಸುವುದಿಲ್ಲ. ಈ ಮೇಲಿನ ಸಾಕ್ಷಿ ಹೇಳಿಕೆ ಹಾಗೂ ಈ ಸಂಬಂಧ ಗುರುತಿಸಿಕೊಂಡಿರುವ ನಿಶಾನೆ ಪಿ-7, ನಿಶಾನೆ ಪಿ-8, ನಿಶಾನೆ ಪಿ-9, 9(ಎ), ನಿಶಾನೆ ಪಿ10 ಹಾಗೂ ನಿಶಾನೆ-ಪಿ11ರ ತನಕದ ದಾಖಲೆಗಳು ಆರೋಪಿತ ಸಿಬ್ಬಂದಿಯು ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ಅರಣ್ಯ ಇಲಾಖೆ ಹಾಗೂ ನಿಗಮದ ಮೇಲಾಧಿಕಾರಿಗಳ ವಿರುದ್ಧ ಸುಳ್ಳು ಅರ್ಜಿಗಳು ಹಾಗೂ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ದಾವೆ ಸಲ್ಲಿಸಿ, ಸಿಬಿಐ ತನಿಖೆಗೆ ಆದೇಶಿಸಲು ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿಯನ್ನು ಸ್ವತ: ಅವರ ಹೆಸರಿನಲ್ಲಿಯೇ ದಾಖಲಿಸಿ <u>ನಿಗಮದ ಕರ್ತವ್ಯದಲ್ಲಿ ಬೇಜವಾಬ್ದಾರಿ, ಅಧಿಕಾರವ್ಯಾಪ್ತಿ ಮೀರಿದ ವರ್ತನೆ ಮತ್ತು ದುರ್ನಡತೆ ಎಸಗುವ ಮೂಲಕ ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966 ರ ನಿಯಮ 3(1) iii ನ್ನು ಹಾಗೂ ನಿಗಮದ ಸೇವಾ ನಿಯಮಾವಳಿಯ ನಿಯಮ ಸಂಖ್ಯೆ: 25, 26 ಮತ್ತು 27 ನ್ನು ಉಲ್ಲಂಘನೆ ಮಾಡಿರುವ ಆರೋಪವೂ ಸಾಬೀತಾಗುತ್ತದೆ</u> ಎಂದು ಅಭಿಪ್ರಾಯಪಡುತ್ತೇನೆ.

Madhu Sharma
30/01/21

15

ಆರೋಪ–5:

ಚಿಕ್ಕಮಗಳೂರು ವಿಭಾಗೀಯ ವ್ಯವಸ್ಥಾಪಕರ ಕಛೇರಿಯ ಪ್ರಭಾರ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಿಗಮದ ಆಂತರೀಕ ವಿಷಯಗಳ ಕುರಿತು ಹಾಗೂ ಬ್ಯಾಗಡಿಹಳ್ಳಿ ಗ್ರಾಮದ ಸರ್ವೆ ನಂಬ್ರ 32 ರ 52 ಎಕರೆ ಅರಣ್ಯ ಪ್ರದೇಶವನ್ನು ಅಕ್ರಮವಾಗಿ ಭೂ ಮಾಫಿಯದಾರರಿಗೆ ಭೂಮಿ ಪರಬಾರೆ ಮಾಡಿರುವ ಬಗ್ಗೆ ನಿಗಮದ ಮೇಲಾಧಿಕಾರಿಗಳ ವಿರುದ್ಧವೇ ಬಿ.ಟಿ.ವಿ ಕನ್ನಡ ಚಾನಲ್‌ಗೆ ಸಂದರ್ಶನವನ್ನು ನೀಡುತ್ತಾ, ನಿಗಮದ ಬಗ್ಗೆ ಸುಳ್ಳು ಮಾಹಿತಿಗಳನ್ನು ಮಾಧ್ಯಮಗಳಿಗೆ ಮೇಲಾಧಿಕಾರಿಗಳ ಪೂರ್ವಾನುಮತಿ ಇಲ್ಲದೇ ನೀಡಿ ನಿಗಮದ ಪ್ರತಿಷ್ಠೆಗೆ ಧಕ್ಕೆ ಉಂಟು ಮಾಡುವುದರ ಮೂಲಕ ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966 ರ ನಿಯಮ 9 ನ್ನು ಹಾಗೂ ನಿಗಮದ ಸೇವಾ ನಿಯಮಾವಳಿಯ ನಿಯಮ ಸಂಖ್ಯೆ 29 ನ್ನು ಆರೋಪಿತ ಸಿಬ್ಬಂದಿಯೂ ಉಲ್ಲಂಘನೆ ಮಾಡಿರುತ್ತಾರೆಯೇ ? – "ಹೌದು"

ಕಾರಣಗಳು :

ನಿಗಮದ ಪರ (1)ನೇ ಸಾಕ್ಷಿದಾರರಾದ ಶ್ರೀ.ಬಿ.ಶಿವರಾಜು, ಕಛೇರಿ ವ್ಯವಸ್ಥಾಪಕರು, ಕೇಂದ್ರ ಕಛೇರಿ ಬೆಂಗಳೂರು ಇವರು ದಿನಾಂಕ: 04.01.2021 ರಂದು ವಿಚಾರಣಾ ಪ್ರಾಧಿಕಾರದ ಮುಂದೆ ನೀಡಿರುವ ಹೇಳಿಕೆಯಲ್ಲಿ ದಿನಾಂಕ: 4–1–2021 ರಂದು ವಿಚಾರಣಾ ಪ್ರಾಧಿಕಾರದ ಸಮಕ್ಷಮದಲ್ಲಿ ನಿಶಾನೆ–ಪಿ15ರ ಸಿ.ಡಿ.ಯನ್ನು ಗಣಕಯಂತ್ರಕ್ಕೆ ಅಳವಡಿಸಿ ಪರಿಶೀಲಿಸಿದಾಗ ಅದರಲ್ಲಿ ಬಿ.ಟಿ.ವಿ ಕನ್ನಡ ಚಾನಲ್‌ಗೆ ಸಂದರ್ಶನ ನೀಡಿ ಬ್ಯಾಗಡಿಹಳ್ಳಿ ಗ್ರಾಮದ ಸರ್ವೆ ನಂಬ್ರ 32 ರ 52 ಎಕರೆ ಅರಣ್ಯ ಪ್ರದೇಶವನ್ನು ಅಕ್ರಮವಾಗಿ ಭೂ ಮಾಫಿಯದಾರರಿಗೆ ಭೂಮಿ ಪರಬಾರೆ ಮಾಡಿರುವ ಕುರಿತು ನಿಗಮದ ಮೇಲಾಧಿಕಾರಿಗಳ ವಿರುದ್ಧ ದೂರು ನೀಡುತ್ತಿರುವುದನ್ನು ಹಾಗೂ ಸಂದರ್ಶನ ನೀಡುತ್ತಿರುವ ವ್ಯಕ್ತಿಯು ಅರೋಪಿತ ಸಿಬ್ಬಂದಿ ಶ್ರೀ.ಪಾಪೇಗೌಡರು ಆಗಿರುತ್ತಾರೆಂದು ಗುರುತಿಸಿಕೊಂಡಿರುತ್ತಾರೆ. ನಿಶಾನೆ–ಪಿ15 ಈ ಆರೋಪವನ್ನು ಸಮರ್ಥಿಸುವ ದಾಖಲೆಯಾಗಿರುತ್ತದೆ ( ಸಿಡಿ–1). ಆರೋಪಿತ ಸಿಬ್ಬಂದಿಯ ಮೇಲೆ ಹೊರಿಸಲಾಗಿರುವ ಈ ಆರೋಪವನ್ನು ಸಮರ್ಥಿಸಲು ಅಥವಾ ಸಾಬೀತುಪಡಿಸಲು ಇದಕ್ಕಿಂತ ಹೆಚ್ಚಿನ ಪುರಾವೆಗಳು/ಸಾಕ್ಷ್ಯಾಧಾರಗಳು ಅಗತ್ಯವೆಂದು ನನಗೆ ಅನಿಸುವುದಿಲ್ಲ. ಇದರಿಂದಾಗಿ ಆರೋಪಿತ ಸಿಬ್ಬಂದಿಯು ಚಿಕ್ಕಮಗಳೂರು ವಿಭಾಗೀಯ ವ್ಯವಸ್ಥಾಪಕರ ಕಛೇರಿಯ ಪ್ರಭಾರ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಿಗಮದ ಆಂತರೀಕ ವಿಷಯಗಳ ಕುರಿತು ಹಾಗೂ ಬ್ಯಾಗಡಿಹಳ್ಳಿ ಗ್ರಾಮದ ಸರ್ವೆ ನಂಬ್ರ 32 ರ 52 ಎಕರೆ ಅರಣ್ಯ ಪ್ರದೇಶವನ್ನು ಅಕ್ರಮವಾಗಿ ಭೂ ಮಾಫಿಯದಾರರಿಗೆ ಭೂಮಿ ಪರಬಾರೆ ಮಾಡಿರುತ್ತಾರೆಂದು <u>ನಿಗಮದ ಮೇಲಾಧಿಕಾರಿಗಳ ವಿರುದ್ಧವೇ ಬಿ.ಟಿ.ವಿ ಕನ್ನಡ ಚಾನಲ್‌ಗೆ ಸಂದರ್ಶನವನ್ನು ನೀಡಿ ನಿಗಮದ ಕುರಿತಂತೆ ಸುಳ್ಳು ಮಾಹಿತಿಗಳನ್ನು ನೀಡಿ ನಿಗಮದ ಪ್ರತಿಷ್ಠೆಗೆ ಧಕ್ಕೆ ಉಂಟು ಮಾಡುವುದರ ಮೂಲಕ ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966 ರ ನಿಯಮ 9 ನ್ನು ಹಾಗೂ ನಿಗಮದ ಸೇವಾ ನಿಯಮಾವಳಿಯ ನಿಯಮ ಸಂಖ್ಯೆ 29 ನ್ನು ಆರೋಪಿತ ಸಿಬ್ಬಂದಿಯು ಉಲ್ಲಂಘನೆ ಮಾಡಿರುವ ಆರೋಪವೂ ಸಾಬೀತಾಗುತ್ತದೆ</u> ಎಂದು ಅಭಿಪ್ರಾಯಪಡಲಾಗಿದೆ.

**ಆರೋಪ :6.**

**ಆರೋಪಿತ ಸಿಬ್ಬಂದಿಯು ಬೆಂಗಳೂರು ವಿಭಾಗೀಯ ವ್ಯವಸ್ಥಾಪಕರ ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಕರ್ತವ್ಯದಲ್ಲಿ ಬೇಜವಾಬ್ದಾರಿ, ನಿರ್ಲಕ್ಷತೆ ಮತ್ತು ಕರ್ತವ್ಯ ಲೋಪದ ಆರೋಪಗಳ ಮೇಲೆ ದಿನಾಂಕ 27.12.2016 ರಂದು ಅಮಾನತ್ತುಪಡಿಸಲಾಗಿರುತ್ತದೆ. ಸದರಿ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ವ್ಯವಸ್ಥಾಪಕ ನಿರ್ದೇಶಕರು, ಕಅಅನಿನಿ ಬೆಂಗಳೂರು ಇವರ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ 1842 ದಿನಾಂಕ 29.11.2017 ರಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ ಸೇವಾ ನಿಯಮಾವಳಿ ನಿಯಮ 46(1) (ii) ರಂತೆ ಖಂಡಿಸಿ ವಾಗ್ದಂಡನೆ ವಿಧಿಸಲಾಗಿರುತ್ತದೆ. ಅವರ ನಡತೆಯನ್ನು ಸುಧಾರಿಸಿಕೊಳ್ಳಲು ಸಾಕಷ್ಟು ಅವಕಾಶ ನೀಡಿದ್ದರೂ ಸಹ ಅವರ ವರ್ತನೆ ಮತ್ತು ಕರ್ತವ್ಯದಲ್ಲಿ ಶಿಸ್ತನ್ನು ತೋರಿಸದೆ ಹಾಗೂ ನಿಗಮದ ನಿಯಮಗಳನ್ನು ಪಾಲಿಸದೆ ನಿಗಮದ ಪ್ರತಿಷ್ಠೆಗೆ ಧಕ್ಕೆಯಾಗುವ ರೀತಿಯಲ್ಲಿ ಚಟುವಟಿಕೆಗಳನ್ನು ನಡೆಸದಂತೆ ಹಲವಾರು ಬಾರಿ ಎಚ್ಚರಿಕೆ ನೀಡಿ ನಡತೆಯನ್ನು ಸುಧಾರಿಸಿಕೊಳ್ಳಲು ಸಾಕಷ್ಟು ಅವಕಾಶ ನೀಡಿದ್ದರೂ ಸಹ ಅವರ ವರ್ತನೆಯಲ್ಲಿ ಯಾವುದೇ ಸುಧಾರಣೆಯಾಗದೆ ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಗಳು 1966 ರ ನಿಯಮ 3(1) i, ii,**

Madhu Sharma
30/01/21

iii , 9(i) (ii) ಹಾಗೂ ನಿಗಮದ ಸೇವಾ ನಿಯಮಾವಳಿಯ ನಿಯಮ ಸಂಖ್ಯೆ 24, 25, 26 ಮತ್ತು 27 ನ್ನು ಉಲ್ಲಂಘನೆ ಮಾಡಿರುತ್ತಾರೆಯೇ ? – "ಹೌದು"

ಕಾರಣಗಳು :

ನಿಗಮದ ಪರ (1)ನೇ ಸಾಕ್ಷಿದಾರರಾದ ಶ್ರೀ.ಬಿ.ಶಿವರಾಜು, ಕಛೇರಿ ವ್ಯವಸ್ಥಾಪಕರು, ಕೇಂದ್ರ ಕಛೇರಿ ಬೆಂಗಳೂರು ಇವರು ದಿನಾಂಕ: 04.01.2021 ರಂದು ವಿಚಾರಣಾ ಪ್ರಾಧಿಕಾರದ ಮುಂದೆ ನೀಡಿರುವ ಹೇಳಿಕೆಯಲ್ಲಿ ಆರೋಪಿತ ಸಿಬ್ಬಂದಿ ಶ್ರೀ. ಎಂ. ಪಾಪೇಗೌಡರು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ ಬೆಂಗಳೂರು ವಿಭಾಗದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯ ನಿರ್ವಹಿಸುವ ಸಮಯದಲ್ಲಿ ದಿನಾಂಕ 07.05.2015 ರಂದು ಹಾಗೂ 21.04.2015 ರಂದು ಟಿವಿ 9 ಕನ್ನಡ ಚಾನೆಲ್‌ಗೆ ನಿಗಮದ ವಿರುದ್ಧ ಹಾಗೂ ನಿಗಮದ ಅಧಿಕಾರಿಗಳ ವಿರುದ್ಧ ಮಾಡಿರುವ ಆರೋಪಗಳಿಗೆ ಸಂಬಂಧಿಸಿ ದಿನಾಂಕ 12.05.2015 ರಂದು ಆರೋಪಿತ ಸಿಬ್ಬಂದಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನೀಡಿರುವ ಸೂಚನಾ ಪತ್ರ, ಕರ್ತವ್ಯದಿಂದ ಅಮಾನತುಗೊಳಿಸಿದ ಆದೇಶ ಹಾಗೂ ಈ ಸಂಬಂಧ ದಿನಾಂಕ 29.11.2017 ರಂದು ಅವರ ಮೇಲಿರುವ ಆರೋಪವನ್ನು ಮನ್ನಿಸಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ ಸೇವಾ ನಿಯಮಾವಳಿ 46(1)(ii) ರಂತೆ ಅವರ ಈ ವರ್ತನೆಯನ್ನು ಖಂಡಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿರುವುದಾಗಿ ತಿಳಿಸಿರುವ ನಿಶಾನೆ ಪಿ–12, ನಿಶಾನೆ ಪಿ–13 ಮತ್ತು ನಿಶಾನೆ ಪಿ–14 ಈ ಸಂಬಂಧ ಗುರುತಿಸಿರುವ ದಾಖಲೆಗಳಾಗಿದ್ದು ಪ್ರಕರಣವನ್ನು ಈಗಾಗಲೇ ಮುಕ್ತಾಯಗೊಳಿಸಿ ಆದೇಶಿಸಲಾಗಿದೆ. ಅವರ ನಡತೆಯನ್ನು ಸುಧಾರಿಸಿಕೊಳ್ಳಲು ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಅವರ ವರ್ತನೆ ಮತ್ತು ಕರ್ತವ್ಯದಲ್ಲಿ ಶಿಸ್ತನ್ನು ತೋರಿಸದೆ ಹಾಗೂ ನಿಗಮದ ನಿಯಮಗಳನ್ನು ಪಾಲಿಸದೆ ನಿಗಮದ ಪ್ರತಿಷ್ಠೆಗೆ ಧಕ್ಕೆಯಾಗುವ ರೀತಿಯಲ್ಲಿ ಅವರ ವರ್ತನೆಯನ್ನು ಮುಂದುವರಿಸಿರುವುದು ಈ ಮೇಲಿನ (1) ರಿಂದ (5)ರ ತನಕದ ಸಾಬೀತಾಗಿರುವ ಆರೋಪಗಳಿಂದ ಅಭಿಪ್ರಾಯಪಡುತ್ತೇನೆ.

ವಿಚಾರಣಾಧಿಕಾರಿಗಳು ಆರೋಪಿತ ನೌಕರರ ಮೇಲೆ ಮಾಡಿರುವ ಎಲ್ಲಾ ಆರೋಪಗಳೂ ಸಾಬೀತಾಗಿವೆಯೆಂದು ತಮ್ಮ ವಿಚಾರಣಾ ವರದಿಯಲ್ಲಿ ತಮ್ಮ findings ನಲ್ಲಿ ತಿಳಿಸಿದ್ದಾರೆ. ಈ ವಿಚಾರಣೆಯಲ್ಲಿ ಆರೋಪಿತ ನೌಕರರು ಯಾವುದೇ ಪ್ರಕ್ರಿಯೆಯಲ್ಲಿ ಭಾಗವಹಿಸದೇ ಇರುವ ಕಾರಣ ಇವರಿಗೆ ವಿಚಾರಣಾ ವರದಿ ಪ್ರತಿಯನ್ನು ಕಳುಹಿಸುವ ಅವಶ್ಯಕತೆ ಇರುವುದಿಲ್ಲವೆಂದು ಸಹಾ ಅಭಿಪ್ರಾಯ ಪಟ್ಟಿರುತ್ತಾರೆ.

ವಿಚಾರಣಾಧಿಕಾರಿಗಳ ವರದಿಯಂತೆ ಆರೋಪಿತ ನೌಕರರು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಸೇವಾ ನಿಯಮ 24, 25, 26, 27, 28, 29, 32, 33, 35 ಮತ್ತು 37 ನ್ನು ಉಲ್ಲಂಘಿಸಿರುವುದು ಸಿದ್ಧಪಡುತ್ತದೆ. ಅಲ್ಲದೇ ಆರೋಪಿತ ನೌಕರರು ಕರ್ನಾಟಕ ಸಿವಿಲ್ ಸೇವಾ(ನಡತೆ) ನಿಯಮಗಳು, 1966 ರ ನಿಯಮ 3(1) (i),(ii),(iii), ಮತ್ತು 9(i)(ii) ನ್ನು ಉಲ್ಲಂಘಿಸಿರುವುದು ಸಿದ್ಧಪಡುತ್ತದೆ.

ಮುಂದುವರೆದು, ಕಛೇರಿಯ ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲಿನ ಅಂಶಗಳ ಜೊತೆಗೆ, ಈ ಕೆಳಗಿನ ವಿಷಯಗಳು ಸಹ ಗಮನಕ್ಕೆ ಬಂದಿರುತ್ತವೆ :

1. 2018 ರಿಂದ 2020ರವರೆಗೆ ಶ್ರೀ ಎಂ.ಪಾಪೇಗೌಡ, ಇವರು 44 ಅರ್ಜಿಗಳನ್ನು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸಲ್ಲಿಸಿರುತ್ತಾರೆ. ಈ ಅರ್ಜಿಗಳು ಇವರ ಕಾರ್ಯವ್ಯಾಪ್ತಿಗೆ ಸಂಬಂಧಿಸಿರುವುದಾಗಿರುವುದಿಲ್ಲ.
2. ಶ್ರೀ ಎಂ.ಪಾಪೇಗೌಡ, ಇವರು ಸುಳ್ಳು ಆಪಾದನೆಗಳನ್ನು ನಿಗಮದ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ, ಮಾನ್ಯ ಕರ್ನಾಟಕ ಲೋಕಾಯುಕ್ತ ಮತ್ತು ಕೇಂದ್ರೀಯ ಅಧಿಕಾರಯುಕ್ತ

Madhu Sharma
30/01/21

ಸಮಿತಿ, ನವದೆಹಲಿ, ಇವರಿಗೆ ದೂರರ್ಜಿ/ದಾವೆಗಳನ್ನು ಸಲ್ಲಿಸಿದ್ದು, ಇವುಗಳಲ್ಲಿ ಕೆಲವು ವಜಾಗೊಂಡಿರುತ್ತವೆ ಮತ್ತು ಕೆಲವು ಪರಿಶೀಲಿಸಲ್ಪಡುತ್ತಿವೆ.

3. ಶ್ರೀ ಎಂ.ಪಾಪೇಗೌಡ, ಇವರು ನಿಗಮದ ವಿರುದ್ಧ ಅಸಂಖ್ಯಾತ ದೂರರ್ಜಿಗಳನ್ನು ಸರ್ಕಾರ ಮತ್ತು ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಸಲ್ಲಿಸಿರುವುದಲ್ಲದೇ, ರಾಜಕೀಯ ವ್ಯಕ್ತಿಗಳಿಂದ ಮತ್ತು ಹೊರಗಿನ ಪ್ರಾಧಿಕಾರಗಳಿಂದ ಅನಗತ್ಯ ಪ್ರಭಾವ ತಂದಿರುತ್ತಾರೆ. ಇಂತಹ ವರ್ತನೆಯಿಂದ ಮೇಲಾಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಅನಗತ್ಯ ಕೆಲಸದ ಒತ್ತಡವುಂಟಾಗಿರುತ್ತದೆ.
4. ಮೇಲಾಧಿಕಾರಿಗಳ ಅನುಮತಿಯನ್ನು ಪಡೆಯದೇ ಮತ್ತು ಹಲವಾರು ಬಾರಿ ಎಚ್ಚರಿಕೆಗಳನ್ನು ನೀಡಿದ್ದಾಗ್ಯೂ, ಶ್ರೀ ಎಂ.ಪಾಪೇಗೌಡ, ಇವರು ಪತ್ರಿಕಾ ಕಛೇರಿಗಳು ಮತ್ತು ಟಿ.ವಿ.ಮಾಧ್ಯಮದವರನ್ನು ಉಪಯೋಗಿಸಿಕೊಂಡು, ನಿಗಮದ ವಿರುದ್ಧ ಅಪಪ್ರಚಾರಗಳನ್ನು ಮಾಡುತ್ತಾ, ನಿಗಮದ ಪ್ರತಿಷ್ಠೆಗೆ ಧಕ್ಕೆ ತಂದಿರುತ್ತಾರೆ.
5. ನಿಗಮದಿಂದ ನೀಡಲಾಗಿರುವ ಎಚ್ಚರಿಕೆ, ಮೆಮೋಗಳು ಮತ್ತು ಸೂಚನೆಗಳನ್ನು ಪದೇ ಪದೇ ಉಲ್ಲಂಘಿಸಿರುತ್ತಾರೆ.
6. ಶ್ರೀ ಎಂ.ಪಾಪೇಗೌಡ, ಇವರು ಕಛೇರಿಯಲ್ಲಿನ ತಮ್ಮ ಆಸನದಲ್ಲಿರದೇ, ಸರ್ಕಾರಿ ಕಛೇರಿಗಳಲ್ಲಿ, ವಿಧಾನ ಸೌಧ, ಬಹು ಮಹಡಿ ಕಟ್ಟಡ, ವಿಕಾಸ ಸೌಧ ಮತ್ತು ಇತರೆ ಸರ್ಕಾರಿ ಕಛೇರಿಗಳಲ್ಲಿ ಕಛೇರಿ ಸಮಯದ ವೇಳೆಯಲ್ಲಿ ಕಂಡು ಬಂದಿರುತ್ತಾರೆ. ಈ ರೀತಿಯ ಚಟುವಟಿಕೆಗಳಿಗೆ ಮೇಲಾಧಿಕಾರಿಗಳ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ ಮತ್ತು ಅವರಿಗೆ ನೀಡಿರುವ ಎಚ್ಚರಿಕೆ, ಸೂಚನೆಗಳನ್ನು ಕಡೆಗಣಿಸಿರುತ್ತಾರೆ.
7. ಕಛೇರಿಯಲ್ಲಿನ ಇತರೆ ಸಿಬ್ಬಂದಿಗಳಿಗೆ ಕಿರುಕುಳ ನೀಡುತ್ತಾ, ತಾವು ಮಾಡಿರುವ ಆಪಾದನೆಗಳನ್ನು ಸಾಬೀತುಪಡಿಸಲು ಅಸಾಧ್ಯವಾದಾಗ, ತಮಗೆ ನಿಗಮದವರಿಂದ ತೊಂದರೆಯುಂಟಾಗುತ್ತಿದ್ದು, ಸೂಕ್ತ ರಕ್ಷಣೆ ನೀಡುವಂತೆ, ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಸರ್ಕಾರ ಮತ್ತು ಪೋಲೀಸ್ ಇಲಾಖೆಯವರನ್ನು ಕೋರಿರುತ್ತಾರೆ.
8. ನಿಗಮದ ಮೇಲಧಿಕಾರಿಗಳಿಂದ ನೀಡಲಾಗಿರುವ ಸೂಚನೆಗಳನ್ನು ಕಡೆಗಣಿಸಿ / ಉಲ್ಲಂಘಿಸಿ, ತಮಗಿಷ್ಟ ಬಂದಂತೆ ಒರಟಾಗಿ ಇತರರೊಂದಿಗೆ ವರ್ತಿಸಿರುತ್ತಾರೆ.
9. ಶ್ರೀ ಎಂ.ಪಾಪೇಗೌಡ, ಇವರ ವಿರುದ್ಧ ಮಾಡಲಾದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ಬಾಕಿಯಿರಿಸಿ, ಅಮಾನತ್ತನ್ನು ತೆರವುಗೊಳಿಸಿ, ಮುಂದಿನ ಆದೇಶದವರೆಗೆ, ಇವರನ್ನು ಐವರ್ನಾಡು ರಬ್ಬರ್ ವಿಭಾಗ, ಸುಳ್ಯ, ಇಲ್ಲಿಗೆ ದಿನಾಂಕ 23.07.2020 ರ ಆದೇಶದಲ್ಲಿ ನೇಮಿಸಲಾಗಿತ್ತು. ಆದರೆ, ಇವರು ತಮಗೆ ವೈದ್ಯಕೀಯ ನೆಲೆಯಲ್ಲಿ ಪುನಃ ಬೆಂಗಳೂರಿಗೆ ವರ್ಗಾವಣೆ (ಅಮಾನತ್ತುಗೊಳ್ಳುವ ಮುನ್ನ ಕಾರ್ಯನಿರ್ವಹಿಸುತ್ತಿದ್ದ ಸ್ಥಳ) ಮಾಡಲು ಕೋರಿಕೊಂಡಿದ್ದು, ಸದರಿಯವರು ಇದುವರೆಗೂ ವಿಭಾಗದಲ್ಲಿ ಕಾರ್ಯವರದಿ ಮಾಡಿಕೊಂಡಿರುವುದಿಲ್ಲವೆಂದು ವಿಭಾಗೀಯ ವ್ಯವಸ್ಥಾಪಕರು, ಐವರ್ನಾಡು ರಬ್ಬರ್ ವಿಭಾಗ, ಸುಳ್ಯ, ಇವರು ದಿನಾಂಕ 14.09.2020 ಮತ್ತು 21.10.2020ರ ತಮ್ಮ ಕಛೇರಿ ಪತ್ರದಲ್ಲಿ ತಿಳಿಸಿರುತ್ತಾರೆ. ಅನಾರೋಗ್ಯದ ಕಾರಣವೊಡ್ಡಿದ್ದರೂ ಸಹ, ಇದೇ ಸಮಯದಲ್ಲಿ ಇವರು ನಿಯಮಿತವಾಗಿ ವಿಕಾಸ ಸೌಧ, ಬಹುಮಹಡಿ ಕಟ್ಟಡ ಮತ್ತು ಅರಣ್ಯ ಭವನದ ಕಛೇರಿ ಸಂಕೀರ್ಣಗಳಲ್ಲಿ ಕಂಡು ಬಂದಿದ್ದು, ನಿಗಮದ ಕೇಂದ್ರ ಕಛೇರಿಗೂ ಸಹ ಮಾಹಿತಿ ಹಕ್ಕು ಅರ್ಜಿಗಳನ್ನು ಮತ್ತು ಇತರೆ ಅರ್ಜಿಗಳನ್ನು ಸಲ್ಲಿಸಲು ಪದೇ ಪದೇ ಬಂದಿರುತ್ತಾರೆ. ಆದುದರಿಂದ, ಶ್ರೀ ಎಂ.ಪಾಪೇಗೌಡ, ಇವರಿಗೆ ವೈದ್ಯಕೀಯ ಮಂಡಳಿಯ ಮುಂದೆ ಹಾಜರಾಗಿ, ಪ್ರಮಾಣ ಪತ್ರವನ್ನು ಸಲ್ಲಿಸಲು ಸೂಚಿಸಲಾಗಿತ್ತು. ಆದರೆ, ವೈದ್ಯಕೀಯ ಮಂಡಳಿಯ ಮುಂದೆ ಹಾಜರಾಗಿ, ತಮ್ಮ ಆರೋಗ್ಯದ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಲು ತಿಳಿಸಿದ್ದರೂ ಸಹ, ಸೂಚನೆಗಳನ್ನು ನಿರ್ಲಕ್ಷಿಸಿರುತ್ತಾರೆ. ಬದಲಿಗೆ, ಇವರನ್ನು ಪುನಃ ಬೆಂಗಳೂರಿಗೆ ವರ್ಗಾಯಿಸುವಂತೆ ಆಡಳಿತ ವರ್ಗದ ಮೇಲೆ ಅನಗತ್ಯ ಒತ್ತಡಗಳನ್ನು ತರುತ್ತಿದ್ದಾರೆ.

Madhu Sharma
30/01/21

ನಿಗಮವು ಒಂದು ವಾಣಿಜ್ಯ ಉದ್ದಿಮೆಯಾಗಿದ್ದು, ಸರ್ಕಾರದಿಂದ ಯಾವುದೇ ಅನುದಾನವನ್ನು ಪಡೆಯುತ್ತಿರುವುದಿಲ್ಲ. ನಿಗಮದ ಸಿಬ್ಬಂದಿಗಳು ಕಾರ್ಯನಿರ್ವಹಿಸಿ ತಮ್ಮ ವೇತನವನ್ನು ಪಡೆಯಬೇಕಾಗಿರುತ್ತದೆ. ಶ್ರೀ ಎಂ.ಪಾಪೇಗೌಡ, ಇವರು ತಮ್ಮ ವ್ಯರ್ಥ ಕೆಲಸಗಳಿಂದ ಮತ್ತು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸಲ್ಲಿಸುವ ವ್ಯರ್ಥ ಅರ್ಜಿಗಳಿಂದ ಸಿಬ್ಬಂದಿಗಳ ಕಛೇರಿಯ ಸಮಯವು ಕಾಲಹರಣವಾಗುತ್ತಿದ್ದು, ಇವರು ಕೇಳುವ ಮಾಹಿತಿಯನ್ನು ಒದಗಿಸುವ ನಿಟ್ಟಿನಲ್ಲಿ, ಸರ್ವೆ ಕೆಲಸಗಳಲ್ಲಿ, ನ್ಯಾಯಾಲಯಕ್ಕೆ ವಕೀಲರನ್ನು ನೇಮಿಸಿ ಹಾಜರಾಗುವುದರಲ್ಲಿ ನಿಗಮವು ವ್ಯರ್ಥವಾಗಿ ಸಮಯವನ್ನು ಕಳೆಯಬೇಕಾಗಿರುತ್ತದೆ. ಶ್ರೀ ಎಂ.ಪಾಪೇಗೌಡ, ಇವರ ಈ ರೀತಿಯ ಅನಗತ್ಯ ಕೆಲಸಗಳಿಂದಾಗಿ ನಿಗಮವು ನಿಯಮಗಳನ್ನು ಪಾಲಿಸುವ ನಿಟ್ಟಿನಲ್ಲಿ, ಅನಾವಶ್ಯಕ ಸಮಯ, ಶಕ್ತಿ ಮತ್ತು ಹಣವನ್ನು ವ್ಯಯಿಸಬೇಕಾಗಿ ಬರುತ್ತಿದ್ದು, ಸಿಬ್ಬಂದಿಗಳೂ ಸಹ ತಮ್ಮ ಕೆಲಸಗಳನ್ನು ಸರಿಯಾಗಿ ನಿರ್ವಹಿಸಲು ಅಸಾಧ್ಯವಾಗಿದ್ದು, ಉದ್ವೇಗಕ್ಕೆ ಒಳಗಾಗಿರುತ್ತಾರೆ. ನಿಗಮಕ್ಕೆ ಉಪಯುಕ್ತವಾಗಿ ಕಾರ್ಯ ನಿರ್ವಹಿಸುವ ಸಿಬ್ಬಂದಿಯಾಗುವ ಬದಲಿಗೆ ಶ್ರೀ ಎಂ.ಪಾಪೇಗೌಡ, ಇವರು ನಿಗಮಕ್ಕೆ ಒಂದು ಹೊರೆಯಾಗಿ ಸಂಭವಿಸಿದ್ದು, ನಿಗಮವು ಇವರಿಗಾಗಿ ತನ್ನ ಸಂಪನ್ಮೂಲವನ್ನು ವ್ಯಯಿಸುತ್ತಿದೆ.

ಈ ಮೇಲಿನ ವಿವರಣೆಗಳಿಂದ, ಶ್ರೀ ಎಂ.ಪಾಪೇಗೌಡ, ಇವರಿಂದ ಯಾವುದೇ ಸಮಯದಲ್ಲಿಯೂ ಯಾವುದೇ ಕೆಲಸಗಳನ್ನು ನಿಗಮವು ಪಡೆಯಲು ಸಾಧ್ಯವಾಗಿರುವುದಿಲ್ಲವೆಂಬ ಅಂಶವು ದೃಢಪಟ್ಟಿರುತ್ತದೆ. ಮುಂದುವರೆದು, ನಿಗಮವು ಇವರಿಗೆ ವೇತನ ರೂಪದಲ್ಲಿ ನೀಡಿರುವ ಅಂದಾಜು ರೂ.50.00 ಲಕ್ಷಗಳ ಹಣವಲ್ಲದೇ, ಇವರು ನೀಡುವ ಹಲವಾರು ದೂರರ್ಜಿಗಳ ಕುರಿತಂತೆ ಕ್ರಮ ಕೈಗೊಳ್ಳಲು ನಿಗಮವು ಅಪಾರವಾದ ಸಮಯ ಮತ್ತು ಹಣವನ್ನು ವ್ಯಯಿಸುವುದಲ್ಲದೇ, ನಿಗಮದ ಘನತೆ/ಗೌರವಕ್ಕೂ ಕುಂದು ಬರುತ್ತಿದೆ ಹಾಗೂ ಇವರ ಅನುಚಿತ ವರ್ತನೆಯಿಂದ ನಿಗಮದ ಇತರೆ ಸಿಬ್ಬಂದಿಗಳಿಗೂ ಸಹ ನಿರಾಳವಾಗಿ ಕಾರ್ಯನಿರ್ವಹಿಸುವುದು ಕಷ್ಟಸಾಧ್ಯವಾಗುತ್ತಿದೆ.

ಶ್ರೀ ಎಂ.ಪಾಪೇಗೌಡ, ಇವರಿಗೆ ತಮ್ಮ ವರ್ತನೆಯನ್ನು ತಿದ್ದಿಕೊಳ್ಳಲು ಹಲವಾರು ಬಾರಿ ಸೂಚನೆಗಳನ್ನು ನೀಡಿ, ಸಮಯಾವಕಾಶಗಳನ್ನು ನೀಡಿದ್ದಾಗ್ಯೂ, ಇವರ ನಡತೆಯು ಸುಧಾರಿಸುವ ಬದಲಿಗೆ ದಿನದಿನಕ್ಕೆ ಹದಗೆಡುತ್ತಿದೆ.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಸೇವಾ ನಿಯಮ 3(g) ಮತ್ತು 5 ರಂತೆ ನಿಗಮದ ಎಲ್ಲಾ ಆಡಳಿತವನ್ನು ನಡೆಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಪೂರ್ಣ ಅಧಿಕಾರವನ್ನು ಪ್ರತ್ಯಾಯೋಜಿಸಿದೆ.

ಭಾರತೀಯ ಕಂಪನಿ ಕಾಯ್ದೆ 2013 ವಿಧಿ 2(51) ರ ಪ್ರಕಾರ ವ್ಯವಸ್ಥಾಪಕ ನಿರ್ದೇಶಕರು ನಿಗಮದ Key Managerial Personnel ಆಗಿದ್ದು, ಇದೇ ಕಾಯ್ದೆಯ ವಿಧಿ 2(54) ರಂತೆ ವ್ಯವಸ್ಥಾಪಕ ನಿರ್ದೇಶಕರು ನಿಗಮದ ಆಡಳಿತವನ್ನು ನಡೆಸಲು ಗಣನೀಯ ಅಧಿಕಾರವನ್ನು *(substantial powers of management of the affairs of the company)* ಹೊಂದಿರುತ್ತಾರೆ.

ಮೇಲ್ಕಂಡ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ, ವ್ಯವಸ್ಥಾಪಕ ನಿರ್ದೇಶಕರ ಕಚೇರಿಗೆ ಸಲ್ಲಿಸಿದ ವಿಚಾರಣಾಧಿಕಾರಿಗಳ ವರದಿಯಲ್ಲಿನ ಫಲಿತಾಂಶ(findings)ದಂತೆ ಈ ಆರೋಪಿತ ನೌಕರರ ಮೇಲೆ ನಿಗದಿಪಡಿಸಿರುವ ಆರೋಪಗಳು ಸಂಪೂರ್ಣವಾಗಿ ಸಿದ್ಧ ಪಟ್ಟಿದ್ದು(proved beyond doubt) ಆರೋಪಿತ ನೌಕರರಿಗೆ ಶಿಕ್ಷೆ ವಿಧಿಸುವುದು ಸ್ವಾಭಾವಿಕ ನ್ಯಾಯದ ದೃಷ್ಟಿಯಿಂದ

Madhu Sharma
30/01/21

(11)

ಸಮರ್ಥನೀಯವಾಗಿದೆ ಎಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ ಸಂಖ್ಯೆ 249/2020-21 ದಿನಾಂಕ : 30-01-2021

ಪ್ರಸ್ತಾವನೆಯಲ್ಲಿ ವಿವರಿಸಿದ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ, ದಿನಾಂಕ 24-06-1974 ರಂದು ನಡೆದ ನಿಗಮದ 14 ನೇ ನಿರ್ದೇಶಕ ಮಂಡಳಿ ಸಭೆಯಲ್ಲಿ ಅನುಮೋದನೆಗೊಂಡ ಸೇವಾ ನಿಯಮಾವಳಿಯ ನಿಯಮ 47 ರಡಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರಿಗೆ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ, ಶ್ರೀ ಎಂ.ಪಾಪೇಗೌಡ, ಪ್ರಥಮ ದರ್ಜೆ ಸಹಾಯಕರು, ಇವರು ನಿಗಮದ ಸೇವಾ ನಿಯಮ ಉಲ್ಲಂಘಿಸಿ ಮಾಡಿರುವ ಕರ್ತವ್ಯಲೋಪ, ಕರ್ತವ್ಯ ನಿರ್ಲಕ್ಷತೆ, ಅಧಿಕಾರ ದುರುಪಯೋಗ, ನಿಗಮದ ನಿಯಮಗಳನ್ನು ಪಾಲನೆ ಮಾಡದಿರುವಿಕೆ, ನಿಗಮದ ವಿರುದ್ಧ ಸುದ್ದಿ ಮಾಧ್ಯಮಗಳಲ್ಲಿ ಅಪಪ್ರಚಾರ ಮಾಡಿರುವುದು, ಕಚೇರಿ ಕೆಲಸಕ್ಕೆ ಅನಧಿಕೃತವಾಗಿ ಗೈರುಹಾಜರಾಗಿರುವುದು, ನಿಗಮದ ಸಂಪನ್ಮೂಲಗಳನ್ನು ದುರುಪಯೋಗ ಪಡಿಸಿಕೊಂಡಿರುವುದು, ನಿಗಮದ ಮೇಲಾಧಿಕಾರಿಗಳಿಗೆ ರಾಜಕೀಯ ಮತ್ತು ಹೊರಗಿನ ಪ್ರಾಧಿಕಾರಗಳಿಂದ ಅನಗತ್ಯ ಪ್ರಭಾವ ತಂದಿರುವುದು ಇವುಗಳನ್ನು ಪರಿಗಣಿಸಿ, ಶಿಸ್ತು ಪ್ರಾಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಆದ ಶ್ರೀಮತಿ ಮಧುಶರ್ಮ, ಭಾ.ಅ.ಸೇ. ಎಂಬ ನಾನು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಕೆಲಸ ಮಾಡುತ್ತಿರುವ ನಿಗಮದ ನೌಕರರ ವರ್ಗದಲ್ಲಿ 'ಸಿ' ಗುಂಪಿನ ವರ್ಗಕ್ಕೆ ಸೇರಿದ ಶ್ರೀ ಎಂ.ಪಾಪೇಗೌಡ, ಪ್ರಥಮ ದರ್ಜೆ ಸಹಾಯಕರು, ಇವರಿಗೆ ಈ ಕೆಳಗಿನಂತೆ ದಂಡನೆಯನ್ನು ಕೂಡಲೇ ಜಾರಿಗೆ ಬರುವಂತೆ ವಿಧಿಸಿದ್ದೇನೆ.

1. ಶ್ರೀ ಎಂ.ಪಾಪೇಗೌಡ ಇವರು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು "ಅಮಾನತ್ತಿನ ಅವಧಿ" ಎಂದು ಪರಿಗಣಿಸುತ್ತೇನೆ.
2. ಶ್ರೀ ಎಂ.ಪಾಪೇಗೌಡ ಇವರ ಅನಧಿಕೃತ ಗೈರು ಹಾಜರಿಯನ್ನು "ಅನಧಿಕೃತ ಗೈರು ಹಾಜರಿ" ಎಂದು ಪರಿಗಣಿಸುತ್ತೇನೆ (ದಿನಾಂಕ 24.07.2020 ರಿಂದ ಇಲ್ಲಿಯವರೆಗೆ).
3. ಶ್ರೀ ಎಂ.ಪಾಪೇಗೌಡರವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಭವಿಷ್ಯದಲ್ಲಿ ಮುಂದಿನ ನೌಕರಿ ಪಡೆಯಲು ಅನರ್ಹಗೊಳಿಸಿ, ಸೇವೆಯಿಂದ ವಜಾ (dismissal from service which shall ordinarily be a disqualification for future employment) ಮಾಡುತ್ತಿದ್ದೇನೆ.

ಶ್ರೀ ಎಂ.ಪಾಪೇಗೌಡ ಇವರು ನಿಗಮದಿಂದ ಯಾವುದೇ ರೀತಿಯ ಸೇವಾ ಮತ್ತು ಆರ್ಥಿಕ ಸೌಲಭ್ಯಗಳನ್ನು ಪಡೆಯಲು ಅರ್ಹರಿರುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇನೆ.

ಈ ಆದೇಶ ಹೊರಡಿಸಿದ ದಿನಾಂಕದ ನಂತರ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತಕ್ಕೂ ಮತ್ತು ಶ್ರೀ ಎಂ.ಪಾಪೇಗೌಡ ಇವರಿಗೂ ಯಾವುದೇ ರೀತಿಯ ಸಂಬಂದವಿರುವುದಿಲ್ಲವೆಂದು ಈ ಮೂಲಕ ಘೋಷಿಸುತ್ತಿದ್ದೇನೆ.

Madhu Sharma 30/01/21

(ಮಧುಶರ್ಮ, ಭಾಅಸೇ,)
ಶಿಸ್ತು ಪ್ರಾಧಿಕಾರಿಗಳು ಮತ್ತು
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ,
ಬೆಂಗಳೂರು

ಗೆ,

ಶ್ರೀ ಎಂ. ಪಾಪೇಗೌಡ,
ಪ್ರಥಮ ದರ್ಜೆ ಸಹಾಯಕರು,
ಮನೆ ನಂ.25, 11ನೇ ಬಿ ಅಡ್ಡ ರಸ್ತೆ,
ಜಕ್ಕೂರು ಬಡಾವಣೆ, ಬೆಂಗಳೂರು-560 064.

ಸಂ:ಕಅಅನಿನಿ/ವ್ಯನಿ/ಎ1/ಸಿಬ್ಬಂದಿ/ವಿಚಾರಣೆ/2020-21/1319 ದಿನಾಂಕ : 30.01.2021
01-02-2021

<u>ಪ್ರತಿಯನ್ನು :</u>

1. ವಂದನಾಪೂರ್ವಕವಾಗಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು, ಇವರಿಗೆ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ನಿರ್ದೇಶಕರು, ಕ.ಅ.ಅ.ನಿ.ನಿ., ಮಂಗಳೂರು / ಶಿವಮೊಗ್ಗ.
3. ವಿತ್ತ ವ್ಯವಸ್ಥಾಪಕರು ಮತ್ತು ಮುಖ್ಯ ಲೆಕ್ಕಾಧಿಕಾರಿಗಳು, ಕ.ಅ.ಅ.ನಿ.ನಿ., ಬೆಂಗಳೂರು.
4. ವಿಭಾಗೀಯ ವ್ಯವಸ್ಥಾಪಕರು, ಕ.ಅ.ಅ.ನಿ.ನಿ., ಶಿವಮೊಗ್ಗ/ಚಿಕ್ಕಮಗಳೂರು/ಧಾರವಾಡ/ಬೆಂಗಳೂರು/ಸುಳ್ಯ ರಬ್ಬರ್ ವಿಭಾಗ, ಸುಳ್ಯ/ಐವರ್ನಾಡು ರಬ್ಬರ್ ವಿಭಾಗ, ಸುಳ್ಯ/ಸುಬ್ರಹ್ಮಣ್ಯ ರಬ್ಬರ್ ವಿಭಾಗ, ಪುತ್ತೂರು/ವ್ಯವಸ್ಥಾಪಕರು, ಕಾರ್ಖಾನೆಗಳು, ಸುಳ್ಯ.
5. ಕೇಂದ್ರ ಕಛೇರಿಯ ಎ-1 ಬಿ / ಎ-1 ಸಿ ಶಾಖೆಗಳಿಗೆ
6. ಕಛೇರಿ ಆದೇಶದ ಕಡತಕ್ಕೆ.
7. ಕಛೇರಿ ಪ್ರತಿ.